रेलवे भर्ती बोर्ड / RAILWAY RECRUITMENT BOARD

सीईएन ०२/२०२६ - तकनीशियन ग्रेड I सिगनल और तकनीशियन ग्रेड III

CEN 02/2026 - Technician Grade I Signal and Technician Grade III

# RRB TECHNICIAN GRADE I SIGNAL 2026

Technician Grade I Signal | CEN 02/2026

**KANNADA ANSWER KEY**

## Official Answer Key

All 2 Shifts · 09-10-2026 to 09-10-2026

| | |
|---|---|
| **Questions** | 100 |
| **Marking** | +1 correct / -1/3 wrong |
| **Duration** | 90 minutes |
| **Sections** | GA 10 · Reasoning 15 · Computers 20 · Maths 20 · Basic Sci & Engg 35 |

Every paper here is the official RRB response sheet with the correct answer marked.

### HOW TO USE THIS BOOK

1. Open the INDEX on the next page.
2. Click any row to jump straight to that date and shift.
3. Correct options are ticked in green, wrong ones crossed in red.
4. Use the bookmarks panel of your PDF reader to move between shifts.

Check your marks, normalized score and zone-wise rank free at
**rank.qmaths.in**

**Blackbook**

Score & Rank Calculator · rank.qmaths.in

Compiled 15 October 2026

# INDEX · Click any row to open that paper

RRB Technician Grade I Signal 2026 (Kannada) · 2 shifts


| DAY | DATE | SHIFT | TIME | PAGE |
|---|---|---|---|---|
| Day 1 | **09-10-2026** | Shift 2 | 12:45 - 14:15 | **3** |
| Day 1 | **09-10-2026** | Shift 3 | 16:30 - 18:00 | **21** |


Generated by rank.qmaths.in

रेलवे भर्ती बोर्ड / RAILWAY RECRUITMENT BOARD
सीईएन ०२/२०२६ - तकनीशियन ग्रेड I सिगनल और तकनीशियन ग्रेड III
CEN 02/2026 - Technician Grade I Signal and Technician Grade III

सत्यमेव जयते

| | |
|---|---|
| Test Date | 09/10/2026 |
| Test Time | 12:45 PM - 2:15 PM |
| Subject | RRB Technician Grade I Signal |

*** Note**
**Correct Answer will carry 1 mark per Question.**
**Incorrect Answer will carry 1/3 Negative mark per Question.**

**1. Options shown in green color with a tick icon are correct.**
**2. Chosen option on the right of the question indicates the option selected by the candidate.**

Section : **General Awareness**

**Q.1** **ಕಛ್ ನ ರಣ್ ಮತ್ತು ಥಾರ್ ಮರುಭೂಮಿಯ ಒಣ ಪ್ರದೇಶಗಳಲ್ಲಿ ಈ ಕೆಳಗಿನ ಯಾವ ಪ್ರಾಣಿಯು ಕಂಡುಬರುತ್ತದೆ?**

**Ans**
- ✗ A. ಆನೆಗಳು (Elephants)
- ✗ B. ರೀಸಸ್ ಮಂಗ (Rhesus macaque)
- ✗ C. ಭಾರತೀಯ ಕಾಡೆಮ್ಮೆ (Indian bison)
- ✓ D. ಭಾರತೀಯ ಕಾಡು ಕತ್ತೆ (Indian wild ass)

**Q.2** **2026 ರ ಜನವರಿಯಲ್ಲಿ, ಭಾರತವು ಸ್ವಾಮಿ ವಿವೇಕಾನಂದರ ಜಯಂತಿಯ ಜನ್ಮದಿನೋತ್ಸವದ ಅಂಗವಾಗಿ "ಆತ್ಮವನ್ನು ಬೆಳಗಿಸಿ, ಜಗತ್ತನ್ನು ಪ್ರಭಾವಿಸಿ" (ಇಗ್ನೈಟ್ ದಿ ಸೆಲ್ಫ್, ಇಂಪ್ಯಾಕ್ಟ್ ದಿ ವರ್ಲ್ಡ್) ಎಂಬ ವಿಷಯವಸ್ತುವಿನೊಂದಿಗೆ ರಾಷ್ಟ್ರೀಯ ಯುವ ದಿನವನ್ನು ಆಚರಿಸಲಾಯಿತು. ಈ ದಿನವನ್ನು ಪ್ರತಿವರ್ಷ ಯಾವ ದಿನಾಂಕದಂದು ಆಚರಿಸಲಾಗುತ್ತದೆ?**

**Ans**
- ✗ A. ಜನವರಿ 14
- ✗ B. ಜನವರಿ 15
- ✗ C. ಜನವರಿ 13
- ✓ D. ಜನವರಿ 12

**Q.3** **PM ಗತಿಶಕ್ತಿ ರಾಷ್ಟ್ರೀಯ ಮಾಸ್ಟರ್ ಪ್ಲ್ಯಾನ್ ಹೊರತಾಗಿಯೂ, ಲಾಜಿಸ್ಟಿಕ್ಸ್ ಕಾರ್ಯಕ್ಷಮತೆ ಸೂಚ್ಯಂಕದಲ್ಲಿ (LPI) ಭಾರತದ ನಿರಂತರ ಅಂತರ (persistent gap) ಉಂಟಾಗಲು ರಚನಾತ್ಮಕವಾಗಿ ಇದು ಕಾರಣವಾಗಿದೆ:**

**Ans**
- ✗ A. ಏರಿದ ಆಮದು ಸುಂಕ ವಿನ್ಯಾಸ
- ✗ B. ವಿನಿಮಯ ದರದ ತಪ್ಪು ಹೊಂದಾಣಿಕೆ
- ✗ C. ಕೃಷಿ ಸಹಾಯಧನದ ವಿಸ್ತರಣೆ
- ✓ D. ಬಹುವಿಧಾನಗಳ ನಡುವಿನ ಸಮನ್ವಯದಲ್ಲಿ ಒಂದಕ್ಕೊಂದು ಹೊಂದಾಣಿಕೆ ಇಲ್ಲದಿರುವುದು

**Q.4** **ಯಾವ ಕಾಯ್ದೆಯು ಈಸ್ಟ್ ಇಂಡಿಯಾ ಕಂಪನಿಯ ನಿಯಂತ್ರಣ ಮಂಡಳಿ ಮತ್ತು ನಿರ್ದೇಶಕರ ಮಂಡಳಿಯನ್ನು (Board of Control and the Court of Directors) ರದ್ದುಗೊಳಿಸಿತು?**

**Ans**
- ✗ A. ಭಾರತೀಯ ಮಂಡಳಿಗಳ ಕಾಯ್ದೆ, 1861
- ✗ B. ಸನ್ನದು ಕಾಯ್ದೆ, 1833
- ✓ C. ಭಾರತ ಸರ್ಕಾರ ಕಾಯ್ದೆ, 1858
- ✗ D. ನಿಯಂತ್ರಣ ಕಾಯ್ದೆ, 1773

Blackbook
Get India's No 1 Vocab Preparation App for FREE : Blackbook : English Vocabulary
GET IT ON Google Play

**Q.5** 2026ರ ಜೂನ್ ತಿಂಗಳಲ್ಲಿ ಭಾರತದ 96ನೇ ಚೆಸ್ ಗ್ರ್ಯಾಂಡ್‌ಮಾಸ್ಟರ್ ಎಂಬ ಹೆಗ್ಗಳಿಕೆಯನ್ನು ಗಳಿಸಿದವರು ಯಾರು?

**Ans**
- ❌ A. ಪ್ರಣವ್ ವೆಂಕಟೇಶ್
- ❌ B. ರೌನಕ್ ಸಾಧ್ವಾನಿ
- ❌ C. ಲಿಯಾನ್ ಲ್ಯೂಕ್ ಮೆಂಡೊಂಕಾ
- ✔ D. ಎಥಾನ್ ವಾಜ್

**Q.6** ಭಾರತೀಯ ಶಾಸ್ತ್ರೀಯ ನೃತ್ಯಕ್ಕೆ ರುಕ್ಮಿಣಿ ದೇವಿ ಅರುಂಡೇಲ್ ಅವರ ಕೊಡುಗೆಯನ್ನು ಈ ಕೆಳಗಿನವುಗಳಲ್ಲಿ ಯಾವ ಆಯ್ಕೆಯು ಸರಿಯಾಗಿ ವಿವರಿಸುತ್ತದೆ?

**Ans**
- ❌ A. ಪ್ರಾದೇಶಿಕ ನೃತ್ಯ ಅಕಾಡೆಮಿಗಳ ಸ್ಥಾಪನೆಯ ಮೂಲಕ ಕಥಕ್ ಪ್ರದರ್ಶನ ಸಂಪ್ರದಾಯಗಳನ್ನು ಕ್ರೋಡೀಕರಿಸಿರುವುದು
- ❌ B. ವಿಶ್ವವಿದ್ಯಾಲಯ ಮಟ್ಟದ ಪ್ರದರ್ಶನ ಕಲೆಗಳ ಶಿಕ್ಷಣದಲ್ಲಿ ಸತ್ರಿಯಾವನ್ನು ಪರಿಚಯಿಸುವ ಮೂಲಕ ಅದನ್ನು ಉತ್ತೇಜಿಸಿರುವುದು
- ✔ C. ವ್ಯವಸ್ಥಿತ ತರಬೇತಿಯ ಮೂಲಕ ಭರತನಾಟ್ಯದ ಸಾಂಸ್ಥೀಕರಣ ಮತ್ತು ಅದರ ಸಾಂಸ್ಕೃತಿಕ ಪ್ರತಿಷ್ಠೆಯನ್ನು ಮರುಸ್ಥಾಪಿಸಿರುವುದು
- ❌ D. ಪುರಾತತ್ತ್ವ ಶಾಸ್ತ್ರದ ಪುನರ್ನಿರ್ಮಾಣ ಮತ್ತು ದೇವಾಲಯ ಶಿಲ್ಪಕಲೆಯ ವ್ಯಾಖ್ಯಾನದ ಮೂಲಕ ಒಡಿಸ್ಸಿಯನ್ನು ಪುನರುಜ್ಜೀವನಗೊಳಿಸಿರುವುದು

**Q.7** ಮೋಂಟೆಗು - ಚೆಲ್ಮ್ಸ್‌ಫೋರ್ಡ್ ಸುಧಾರಣೆಗಳನ್ನು ______ ಎಂದು ಸಹ ಕರೆಯಲಾಗುತ್ತದೆ.

**Ans**
- ❌ A. ಭಾರತೀಯ ಮಂಡಳಿಗಳ ಕಾಯ್ದೆ, 1909
- ✔ B. ಭಾರತ ಸರ್ಕಾರ ಕಾಯ್ದೆ, 1919
- ❌ C. ಸನ್ನದು ಕಾಯ್ದೆ, 1853
- ❌ D. ಭಾರತ ಸರ್ಕಾರ ಕಾಯ್ದೆ, 1935

**Q.8** ವಸಾಹತುಶಾಹಿ ಅವಧಿಯಲ್ಲಿ ಬ್ರಿಟಿಷ್ ಆಡಳಿತದೊಂದಿಗೆ ಸಹಯೋಗ ಮಾಡಿಕೊಂಡ ಮತ್ತು ಬುಡಕಟ್ಟು ಜನಸಮೂಹದ ಮೇಲೆ ದಬ್ಬಾಳಿಕೆ ನಡೆಸಿದ ಶೋಷಿಸುವ ಹೊರಗಿನವರನ್ನು ವರ್ಣಿಸಲು ಬುಡಕಟ್ಟು ಸಮುದಾಯಗಳು ಯಾವ ಪದವನ್ನು ಬಳಸುತ್ತಿದ್ದವು?

**Ans**
- ❌ A. ಜಾಗಿರುದಾರರು (Jagirdars)
- ❌ B. ರೈತರು (Ryots)
- ❌ C. ಸರ್ದಾರ್‌ಗಳು (Sardars)
- ✔ D. ಡಿಕುಗಳು (Dikus)

**Q.9** 2026 ರ ಏಪ್ರಿಲ್ ತಿಂಗಳಲ್ಲಿ, ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವರು ಕ್ರೀಡಾ ಕ್ಷೇತ್ರಕ್ಕೆ ಸಂಬಂಧಿಸಿದ ಬೌದ್ಧಿಕ ಆಸ್ತಿ ನೋಂದಣಿಯ ಶುಲ್ಕವನ್ನು ಎಷ್ಟು ಅವಧಿಗೆ ಮನ್ನಾ ಮಾಡುವುದಾಗಿ ಘೋಷಿಸಿದರು?

**Ans**
- ❌ A. ಎರಡು ವರ್ಷಗಳು
- ❌ B. ಐದು ವರ್ಷಗಳು
- ❌ C. ಒಂದು ವರ್ಷ
- ✔ D. ಮೂರು ವರ್ಷಗಳು

**Q.10** 1885 ರಲ್ಲಿ ನಡೆದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಉದ್ಘಾಟನಾ ಅಧಿವೇಶನದಲ್ಲಿ ಅದರ ಮೊದಲ ಅಧ್ಯಕ್ಷರಾಗಿ ಯಾರನ್ನು ಆಯ್ಕೆ ಮಾಡಲಾಗಿತ್ತು?

**Ans**
- ❌ A. ಬಾಲಗಂಗಾಧರ ತಿಲಕ್
- ✔ B. ಉಮೇಶ್ ಚಂದ್ರ ಬ್ಯಾನರ್ಜಿ
- ❌ C. ಅಲನ್ ಆಕ್ಟೇವಿಯನ್ ಹ್ಯೂಮ್
- ❌ D. ದಾದಾಭಾಯಿ ನವರೋಜಿ

Section : **General Intelligence and Reasoning**

Get India's No 1 Vocab Preparation App for FREE : **Blackbook : English Vocabulary**
GET IT ON Google Play

Q.11 ಈ ಕೆಳಗೆ ಒಂದು ಪ್ರಶ್ನೆಯನ್ನು ನೀಡಲಾಗಿದೆ ಮತ್ತು ಅದರ ನಂತರ (I) ಮತ್ತು (II) ಎಂದು ಸಂಖ್ಯೆಗಳನ್ನು ನೀಡಿದ ಎರಡು ಹೇಳಿಕೆಗಳನ್ನು ನೀಡಲಾಗಿದೆ. ಈ ಹೇಳಿಕೆಗಳಲ್ಲಿ ನೀಡಲಾದ ಮಾಹಿತಿಯು ಪ್ರಶ್ನೆಗೆ ಉತ್ತರಿಸಲು ಸಾಕಾಗುತ್ತದೆಯೇ ಎಂದು ನೀವು ನಿರ್ಧರಿಸಬೇಕು. ಈ ಎರಡೂ ಹೇಳಿಕೆಗಳನ್ನು ಓದಿರಿ ಮತ್ತು ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿರಿ.
S, L, I, G ಮತ್ತು T ಎಂಬ 5 ಕಂಬಗಳಿದ್ದು, ಪ್ರತಿಯೊಂದು ವಿಭಿನ್ನ ಎತ್ತರವನ್ನು ಹೊಂದಿವೆ, ಯಾವ ಕಂಬವು ಅತ್ಯಂತ ಕಡಿಮೆ ಎತ್ತರವಿದೆ?
(I) G ಕಂಬವು T ಗಿಂತ ಕಡಿಮೆ ಎತ್ತರವಿದೆ ಆದರೆ L ಕಂಬಕ್ಕಿಂತ ಎತ್ತರವಾಗಿದೆ. S ಕಂಬವು L ಕಂಬಕ್ಕಿಂತ ಎತ್ತರವಾಗಿದೆ.
(II) I ಕಂಬವು ಕೇವಲ ಒಂದು ಕಂಬಕ್ಕಿಂತ ಎತ್ತರವಾಗಿದೆ.

Ans
✔ A. ಹೇಳಿಕೆ I ಮತ್ತು ಹೇಳಿಕೆ II ಇವೆರಡರ ಒಟ್ಟುಗೂಡಿಸಿದ ಮಾಹಿತಿಗಳು (ಕೇವಲ ಹೇಳಿಕೆ 1 ಒಂದೇ ಅಲ್ಲ ಅಥವಾ ಕೇವಲ ಹೇಳಿಕೆ II ಒಂದೇ ಅಲ್ಲ) ಪ್ರಶ್ನೆಗೆ ಉತ್ತರಿಸಲು ಸಾಕಾಗುತ್ತವೆ

✗ B. ಪ್ರಶ್ನೆಗೆ ಉತ್ತರಿಸಲು ಹೇಳಿಕೆ II ರಲ್ಲಿರುವ ಮಾಹಿತಿಯೊಂದೇ ಸಾಕಾಗುತ್ತದೆ, ಆದರೆ ಹೇಳಿಕೆ I ರಲ್ಲಿರುವ ಮಾಹಿತಿಯೊಂದೇ ಸಾಕಾಗುವುದಿಲ್ಲ

✗ C. ಹೇಳಿಕೆ I ಮತ್ತು ಹೇಳಿಕೆ II ರ ಒಟ್ಟುಗೂಡಿಸಿದ ಮಾಹಿತಿಯು ಪ್ರಶ್ನೆಗೆ ಉತ್ತರಿಸಲು ಸಾಕಾಗುವುದಿಲ್ಲ

✗ D. ಪ್ರಶ್ನೆಗೆ ಉತ್ತರಿಸಲು ಹೇಳಿಕೆ I ರಲ್ಲಿರುವ ಮಾಹಿತಿಯೊಂದೇ ಸಾಕಾಗುತ್ತದೆ, ಆದರೆ ಹೇಳಿಕೆ II ರಲ್ಲಿರುವ ಮಾಹಿತಿಯೊಂದೇ ಸಾಕಾಗುವುದಿಲ್ಲ

Q.12 :: ಎಡಕ್ಕೆ ಇರುವ ಅಕ್ಷರಗುಚ್ಛ ಜೋಡಿ ಮತ್ತು :: ಬಲಕ್ಕೆ ಇರುವ ಅಕ್ಷರಗುಚ್ಛ ಜೋಡಿಯ ನಡುವಿನ ಮಾದರಿ ಮತ್ತು ಸಂಬಂಧವು ಒಂದೇ ಆಗಿರಬೇಕಾದರೆ # ಮತ್ತು % ಬದಲಿಗೆ ಈ ಕೆಳಗಿನ ಯಾವ ಅಕ್ಷರಗುಚ್ಛಗಳು ಬರಬೇಕು?

# : BDJ :: KMS : %

Ans
✗ A. # = FHR % = FDO

✔ B. # = FHN % = GIO

✗ C. # = IUN % = GIN

✗ D. # = FRE % = ASO

Q.13 ಗೋರ್ ಅವರು A ಬಿಂದುವಿನಿಂದ ಚಾಲನೆ ಮಾಡಲು ಪ್ರಾರಂಭಿಸುತ್ತಾರೆ ಮತ್ತು ಉತ್ತರ ದಿಕ್ಕಿನೆಡೆಗೆ 10 km ಚಲಾಯಿಸುತ್ತಾರೆ. ನಂತರ ಅವರು ಎಡಕ್ಕೆ ತಿರುಗಿ 12 km ಚಲಾಯಿಸುತ್ತಾರೆ. ನಂತರ ಎಡಕ್ಕೆ ತಿರುಗಿ 13 km ಚಲಾಯಿಸುತ್ತಾರೆ. ಮತ್ತೊಮ್ಮೆ ಅವರು ಎಡಕ್ಕೆ ತಿರುಗಿ 15 km ಚಲಾಯಿಸುತ್ತಾರೆ. ಅಂತಿಮವಾಗಿ ಅವರು ಎಡಕ್ಕೆ ತಿರುಗಿ 3 km ಚಲಾಯಿಸುತ್ತಾರೆ ಮತ್ತು P ಬಿಂದುವಿನಲ್ಲಿ ನಿಲ್ಲುತ್ತಾರೆ. ಹಾಗಾದರೆ ಅವರು ಮತ್ತೆ A ಬಿಂದುವನ್ನು ತಲುಪಲು ಎಷ್ಟು ದೂರ (ಅತ್ಯಂತ ಕಡಿಮೆ ದೂರ) ಮತ್ತು ಯಾವ ದಿಕ್ಕಿನಲ್ಲಿ ಚಾಲನೆ ಮಾಡಬೇಕು? (ನಿರ್ದಿಷ್ಟವಾಗಿ ಸೂಚಿಸದ ಹೊರತು ಎಲ್ಲಾ ತಿರುವುಗಳು ಕೇವಲ 90° ತಿರುವುಗಳಾಗಿವೆ.)

Ans
✗ A. 6 km ದಕ್ಷಿಣಕ್ಕೆ

✗ B. 4 km ಪೂರ್ವಕ್ಕೆ

✗ C. 7 km ಉತ್ತರಕ್ಕೆ

✔ D. 3 km ಪಶ್ಚಿಮಕ್ಕೆ

Q.14 ಈ ಪ್ರಶ್ನೆಯು ಕೆಳಗೆ ನೀಡಿರುವ ಪದಗಳನ್ನು ಆಧರಿಸಿದೆ.
APE BAT SUN ANT
ಬಲದಿಂದ ಮೂರನೇ ಪದದ ಮೂರನೇ ಅಕ್ಷರ ಮತ್ತು ಎಡದಿಂದ ಮೊದಲನೇ ಪದದ ಮೊದಲನೇ ಅಕ್ಷರದ ನಡುವೆ ಇಂಗ್ಲಿಷ್ ವರ್ಣಮಾಲೆಯ ಅನುಕ್ರಮದಲ್ಲಿ ಎಷ್ಟು ಅಕ್ಷರಗಳಿವೆ?

Ans
✗ A. 16

✔ B. 18

✗ C. 14

✗ D. 12

Q.15 :: ಎಡಕ್ಕೆ ಇರುವ ಅಕ್ಷರಗುಚ್ಛ ಜೋಡಿ ಮತ್ತು :: ಬಲಕ್ಕೆ ಇರುವ ಅಕ್ಷರಗುಚ್ಛ ಜೋಡಿಯ ನಡುವಿನ ಮಾದರಿ ಮತ್ತು ಸಂಬಂಧವು ಒಂದೇ ಆಗಿರಬೇಕಾದರೆ # ಮತ್ತು % ಜಾಗಕ್ಕೆ ಈ ಕೆಳಗಿನ ಯಾವ ಅಕ್ಷರಗುಚ್ಛಗಳು ಬರಬೇಕು?

Ans
✗ A. # = HIX; % = ELU

✗ B. # = HOX; % = ELO

✔ C. # = HOX; % = ELU

✗ D. # = KOX; % = ELU

Blackbook

Get India's No 1 Vocab Preparation App for FREE : Blackbook : English Vocabulary
GET IT ON Google Play

Q.16 ಈ ಕೆಳಗಿನ ಅಕ್ಷರ, ಚಿಹ್ನೆಯ ಸರಣಿಯನ್ನು ಅವಲೋಕಿಸಿ ಮತ್ತು ಪ್ರಶ್ನೆಗೆ ಉತ್ತರಿಸಿ.
ಎಣಿಕೆಯನ್ನು ಎಡದಿಂದ ಬಲಕ್ಕೆ ಮಾತ್ರ ಮಾಡಬೇಕು.
(ಎಡ) & Q € G @ £ Y & T N T # Z L * % * K P @ M S (ಬಲ)
ಪ್ರತಿಯೊಂದೂ ತನ್ನ ತಕ್ಷಣದ ಹಿಂದೆ ಚಿಹ್ನೆಯನ್ನು ಮತ್ತು ತನ್ನ ತಕ್ಷಣದ ಮುಂದೆಯೂ ಚಿಹ್ನೆಯನ್ನು ಹೊಂದಿರುವಂತಹ ಎಷ್ಟು ಅಕ್ಷರಗಳು ಇಲ್ಲಿವೆ?

Ans
- ✗ A. 6
- ✓ B. 3
- ✗ C. 4
- ✗ D. 5

Q.17 ಒಂದು ನಿರ್ದಿಷ್ಟ ತರ್ಕವನ್ನು ಅನುಸರಿಸಿ, 23 ಎಂಬುದು 117 ಕ್ಕೆ ಸಂಬಂಧಿಸಿದೆ. ಅದೇ ತರ್ಕವನ್ನು ಅನುಸರಿಸಿ, 31 ಎಂಬುದು 157 ಕ್ಕೆ ಸಂಬಂಧಿಸಿದೆ. ಹಾಗಾದರೆ ಅದೇ ತರ್ಕವನ್ನು ಅನುಸರಿಸಿದಾಗ, 42 ಎಂಬುದು ನೀಡಿರುವ ಆಯ್ಕೆಗಳಲ್ಲಿ ಯಾವುದಕ್ಕೆ ಸಂಬಂಧಿಸಿದೆ?

(ಸೂಚನೆ: ಸಂಖ್ಯೆಗಳನ್ನು ಅವುಗಳ ಬಿಡಿ ಅಂಕಿಗಳಾಗಿ ವಿಭಜಿಸದೆ, ಪೂರ್ಣ ಸಂಖ್ಯೆಗಳ ಮೇಲೆ ಕ್ರಿಯೆಗಳನ್ನು ನಡೆಸಬೇಕು. ಉದಾ. ಸಂಖ್ಯೆ 13 ಅನ್ನು 13 ಎಂದು ತೆಗೆದುಕೊಂಡು ಅದರ ಮೇಲೆ ಸಂಕಲನ/ವ್ಯವಕಲನ/ಗುಣಾಕಾರ ಮುಂತಾದ ಕ್ರಿಯೆಗಳನ್ನು ಮಾಡಬಹುದು. 13 ಅನ್ನು 1 ಮತ್ತು 3 ಆಗಿ ವಿಭಜಿಸಿ ನಂತರ 1 ಮತ್ತು 3 ರ ಮೇಲೆ ಬೇರೆ ಬೇರೆಯಾಗಿ ಗಣಿತದ ಕ್ರಿಯೆಗಳನ್ನು ಮಾಡುವಂತಿಲ್ಲ.)

Ans
- ✗ A. 204
- ✗ B. 207
- ✓ C. 212
- ✗ D. 216

Q.18 ಒಂದು ನಿರ್ದಿಷ್ಟ ಸಂಕೇತ ಭಾಷೆಯಲ್ಲಿ, 'song card flash' ಎಂಬುದನ್ನು 'ng nr ic' ಎಂದು ಸಂಕೇತಿಸಲಾಗಿದೆ ಮತ್ತು 'card king tent' ಎಂಬುದನ್ನು 'tf ma nr' ಎಂದು ಸಂಕೇತಿಸಲಾಗಿದೆ. ಹಾಗಾದರೆ, ಕೊಟ್ಟಿರುವ ಸಂಕೇತ ಭಾಷೆಯಲ್ಲಿ 'card' ಎಂಬುದರ ಸಂಕೇತವೇನು?

Ans
- ✗ A. tf
- ✓ B. nr
- ✗ C. ic
- ✗ D. ng

Q.19 ಒಂದು ನಿರ್ದಿಷ್ಟ ಸಂಕೇತದಲ್ಲಿ,
'same old habits' ಎಂಬುದನ್ನು 'tk dh fx' ಎಂದು ಸಂಕೇತಿಸಲಾಗಿದೆ,
'same house beautiful' ಎಂಬುದನ್ನು 'wj ts tk' ಎಂದು ಸಂಕೇತಿಸಲಾಗಿದೆ ಮತ್ತು
'old village house' ಎಂಬುದನ್ನು 'dh tm ts' ಎಂದು ಸಂಕೇತಿಸಲಾಗಿದೆ.
(ಎಲ್ಲಾ ಸಂಕೇತಗಳು ಎರಡಕ್ಷರದ ಸಂಕೇತಗಳಾಗಿವೆ.)

ಹಾಗಾದರೆ 'Beautiful old' ಎಂಬುದರ ಸಂಭಾವ್ಯ ಸಂಕೇತವೇನು?

Ans
- ✓ A. wj dh
- ✗ B. fx ts
- ✗ C. wj tk
- ✗ D. fx tm

Q.20 ಕೆಳಗೆ ನೀಡಿರುವ ಸರಣಿಯನ್ನು ತಾರ್ಕಿಕವಾಗಿ ಪೂರ್ಣಗೊಳಿಸಲು ಸರಣಿಯಲ್ಲಿನ ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಈ ಕೆಳಗಿನ ಯಾವ ಅಕ್ಷರ-ಸಂಖ್ಯಾ ಗುಚ್ಛವನ್ನು ಹಾಕಬೇಕು?

YBZ 68 XAY 79 WZX 90 VYW 101 ?

Ans
- ✗ A. UYV 111
- ✓ B. UXV 112
- ✗ C. UYV 112
- ✗ D. UXV 111

Blackbook

Get India's No 1 Vocab Preparation App for FREE : Blackbook : English Vocabulary
GET IT ON Google Play

Q.21 ಒಂದು ವೇಳೆ 'A' ಎಂದರೆ '÷', 'B' ಎಂದರೆ '×', 'C' ಎಂದರೆ '+' ಮತ್ತು 'D' ಎಂದರೆ '-' ಆಗಿದ್ದರೆ, ಕೊಟ್ಟಿರುವ ಸರಣಿಯಲ್ಲಿರುವ ಪ್ರಶ್ನಾರ್ಥಕ ಚಿಹ್ನೆಯ (?) ಸ್ಥಾನದಲ್ಲಿ ಯಾವ ಸಂಖ್ಯೆಯು ಸರಿಹೊಂದುತ್ತದೆ?

22 D 14 A 2 C 7 B 3 = ?

Ans
- ✗ A. 33
- ✓ B. 36
- ✗ C. 34
- ✗ D. 35

Q.22 ಕೆಳಗೆ ಕೊಟ್ಟಿರುವ ಸರಣಿಯಲ್ಲಿ ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಯಾವುದು ಸರಿಹೊಂದುತ್ತದೆ?

54 68 88 114 146 184 ?

Ans
- ✗ A. 119
- ✓ B. 228
- ✗ C. 231
- ✗ D. 223

Q.23 ಇಂಗ್ಲಿಷ್ ವರ್ಣಮಾಲೆಯ ಅನುಕ್ರಮವನ್ನು ಆಧರಿಸಿ, ಈ ಕೆಳಗಿನ ನಾಲ್ಕು ಅಕ್ಷರ ಗುಚ್ಛ ಜೋಡಿಗಳಲ್ಲಿ ಮೂರು ಜೋಡಿಗಳು ನಿರ್ದಿಷ್ಟ ರೀತಿಯಲ್ಲಿ ಸದೃಶವಾಗಿದ್ದು ಒಂದೇ ಗುಂಪಿಗೆ ಸೇರುತ್ತವೆ. ಈ ಕೆಳಗಿನವುಗಳಲ್ಲಿ ಯಾವುದು ಆ ಗುಂಪಿಗೆ ಸೇರುವುದಿಲ್ಲ?
(ಸೂಚನೆ: ಗುಂಪಿಗೆ ಸೇರದ ಅಕ್ಷರ ಗುಚ್ಛವು ವ್ಯಂಜನಗಳು/ಸ್ವರಗಳ ಸಂಖ್ಯೆ ಅಥವಾ ಅಕ್ಷರ-ಗುಚ್ಛದಲ್ಲಿನ ಅವುಗಳ ಸ್ಥಾನವನ್ನು ಆಧರಿಸಿರುವುದಿಲ್ಲ.)

Ans
- ✓ A. BC – KL
- ✗ B. DF – KM
- ✗ C. GI – NP
- ✗ D. MO – TV

Q.24 G, H, I, J, K, L ಮತ್ತು M ಎಂಬ ಪ್ರತಿಯೊಬ್ಬರೂ ಸೋಮವಾರದಿಂದ ಪ್ರಾರಂಭವಾಗಿ ಅದೇ ವಾರದ ಭಾನುವಾರದಂದು ಕೊನೆಗೊಳ್ಳುವಂತೆ ವಾರದ ಬೇರೆ ಬೇರೆ ದಿನಗಳಲ್ಲಿ ಒಂದು ಆಟವನ್ನು ಆಡುತ್ತಾರೆ. M ಕೊನೆಯ ದಿನದಂದು ಆಡುತ್ತಾರೆ. M ಮತ್ತು J ನಡುವೆ ಕೇವಲ ಮೂವರು ಆಟ ಆಡುತ್ತಾರೆ. G ಯು H ಗಿಂತ ತಕ್ಷಣದ ಮೊದಲು ಮತ್ತು H ಅವರು J ಗಿಂತ ತಕ್ಷಣದ ಮೊದಲು ಆಡುತ್ತಾರೆ. L ಅವರು K ಗಿಂತ ತಕ್ಷಣದ ಮೊದಲು ಆಡುತ್ತಾರೆ, ಆದರೆ L ಅವರು ಗುರುವಾರದಂದು ಆಟ ಆಡುವುದಿಲ್ಲ. ಹಾಗಾದರೆ I ಯು ಯಾವ ದಿನದಂದು ಆಟವನ್ನು ಆಡುತ್ತಾರೆ?

Ans
- ✗ A. ಮಂಗಳವಾರ
- ✓ B. ಗುರುವಾರ
- ✗ C. ಶುಕ್ರವಾರ
- ✗ D. ಸೋಮವಾರ

Q.25 ಒಂದು ನಿರ್ದಿಷ್ಟ ಸಂಕೇತ ಭಾಷೆಯಲ್ಲಿ,

A + B ಎಂದರೆ 'A ಅವರು B ಅವರ ಸಹೋದರಿ'
A - B ಎಂದರೆ 'A ಅವರು B ಅವರ ಸಹೋದರ'
A × B ಎಂದರೆ 'A ಅವರು B ಅವರ ಗಂಡ'
A ÷ B ಎಂದರೆ 'A ಅವರು B ಅವರ ತಾಯಿ'

ಮೇಲಿನದನ್ನು ಆಧರಿಸಿ, ಒಂದು ವೇಳೆ 'P - Q × R ÷ S + T' ಆಗಿದ್ದರೆ P ಅವರು T ಅವರಿಗೆ ಹೇಗೆ ಸಂಬಂಧಿ?

Ans
- ✗ A. ತಂದೆಯ ತಂದೆ
- ✗ B. ತಾಯಿಯ ತಂದೆ
- ✓ C. ತಂದೆಯ ಸಹೋದರ
- ✗ D. ತಾಯಿಯ ಸಹೋದರ

Section : **Basics of Computers and Application**

Get India's No 1 Vocab Preparation App for FREE : **Blackbook : English Vocabulary**
GET IT ON Google Play

**Q.26** ಎನ್‌ಕ್ರಿಪ್ಟ್ ಮಾಡಲಾದ ಹಣಕಾಸಿನ ಸ್ಪ್ರೆಡ್‌ಶೀಟ್‌ನಲ್ಲಿ, ಬೇರೆ ಶೀಟ್‌ನಲ್ಲಿರುವ ತ್ರೈಮಾಸಿಕ ಮಾರಾಟ ಕೋಷ್ಟಕದ ಒಟ್ಟು ಮೊತ್ತವನ್ನು ಮಿರಂಡಾ ಅವರು ಉಲ್ಲೇಖಿಸಲು ಬಯಸುತ್ತಾರೆ. ಆದರೆ ಫೈಲ್ ತೆರೆದಾಗಲೆಲ್ಲಾ ಕೋಷ್ಟಕದ ಸೆಲ್ ಗಳು ಕ್ರಿಯಾತ್ಮಕವಾಗಿ ವಿಂಗಡನೆಗೊಳ್ಳುತ್ತವೆ. ಶೀಟ್ ನೊಳಗೆ ಕೋಷ್ಟಕವನ್ನು ಹೇಗೆ ವಿಂಗಡಿಸಲಾಗಿದೆ ಅಥವಾ ಸರಿಸಲಾಗಿದೆ ಎಂಬುದನ್ನು ಲೆಕ್ಕಿಸದೆ, ಅವರ ಸೂತ್ರವು ಪ್ರಸ್ತುತ ಒಟ್ಟು ಮೊತ್ತವನ್ನುನಿರಂತರವಾಗಿ ಹಿಂತಿರುಗಿಸುವುದನ್ನು ಖಚಿತಪಡಿಸಿಕೊಳ್ಳುವುದನ್ನು ಯಾವ ಸೆಲ್ ಉಲ್ಲೇಖ ವಿಧಾನವು ಖಾತರಿಪಡಿಸುತ್ತದೆ?

**Ans**
- ✗ A. Sheet1!C10 ಅನ್ನು ಉಲ್ಲೇಖವಾಗಿ ಬಳಸಿಕೊಂಡು ಒಟ್ಟು ಸೆಲ್ ಗೆ ಲಿಂಕ್ ಮಾಡುವುದು
- ✗ B. C10 ನಂತಹ ಸಂಬಂಧಿತ ಸೆಲ್‌ನ ವಿಳಾಸದೊಂದಿಗೆ ಒಟ್ಟು ಮೊತ್ತವನ್ನು ಉಲ್ಲೇಖಿಸುವುದು
- ✓ C. ಒಟ್ಟು ಸೆಲ್ ಗೆ ಹೆಸರಿಸಲಾದ ಶ್ರೇಣಿಯನ್ನು ವ್ಯಾಖ್ಯಾನಿಸುವುದು ಮತ್ತು ಸೂತ್ರದಲ್ಲಿನ ಹೆಸರನ್ನು ಬಳಸುವುದು
- ✗ D. $C$10 ಸೂತ್ರದಂತಹ ಸಂಪೂರ್ಣ ಉಲ್ಲೇಖ (absolute reference) ವನ್ನು ಬಳಸುವುದು

**Q.27** ಪವರ್‌ಪಾಯಿಂಟ್ ಅನ್ನು ಪ್ರಾರಂಭಿಸಿದ ನಂತರ, ಸಂಪೂರ್ಣವಾಗಿ ಖಾಲಿ ಪ್ರೆಸೆಂಟೇಷನ್‌ನಿಂದ ಶುರು ಮಾಡಲು ಯಾವ ಆಯ್ಕೆಯನ್ನು ಸೆಲೆಕ್ಟ್ ಮಾಡಬೇಕು?

**Ans**
- ✗ A. ಕಂಟೆಂಟ್ ಲೇಔಟ್
- ✓ B. ಬ್ಲಾಂಕ್ ಪ್ರೆಸೆಂಟೇಷನ್
- ✗ C. ಪಿಕ್ಚರ್ ಆಲ್ಬಂ
- ✗ D. ಓಪನ್ ಎಕ್ಸಿಸ್ಟಿಂಗ್

**Q.28** ಒಬ್ಬ ಸಂಪಾದಕಿ MS ವರ್ಡ್ ನಲ್ಲಿ ಒಂದು ತಾಂತ್ರಿಕ ಕೈಪಿಡಿಯನ್ನು ತಯಾರಿಸುತ್ತಿದ್ದು, ಅದರಲ್ಲಿ ಪ್ರತಿಯೊಂದು ವಿಭಾಗವು ಒಂದು ವಿಶಿಷ್ಟ ಹೆಡರ್ ಜೊತೆಗೆ ಪ್ರಾರಂಭವಾಗಬೇಕಾಗುತ್ತದೆ ಮತ್ತು ಕೆಲವು ಪ್ಯಾರಾಗಳಿಗೆ ನಿಖರವಾದ ಜೋಡಣೆ ಹೊಂದಾಣಿಕೆಗಳು ಬೇಕಾಗುತ್ತವೆ. ನಡುವೆ, ಕೆಲವು ಹೆಡರುಗಳನ್ನು ತಪ್ಪಾಗಿ ಜೋಡಿಸಲಾಗಿದೆ ಮತ್ತು ಕೆಲವು ಪ್ಯಾರಾಗಳನ್ನು ವಿವಿಧ ಮೂಲಗಳಿಂದ ಅಂಟಿಸಿದ ನಂತರ ಅವುಗಳು ಅಸಮಂಜಸವಾದ ಅಂತರವನ್ನು ಪ್ರದರ್ಶಿಸುತ್ತಿರುವುದನ್ನು ಅವಳು ಗಮನಿಸಿದಳು. ಯಾವ ಕ್ರಿಯೆಯ ಅನುಕ್ರಮವು ಎಲ್ಲಾ ಹೆಡರುಗಳು ಮತ್ತು ಮುಖ್ಯ ಪಠ್ಯವು ಏಕರೂಪದ ಸ್ವರೂಪವನ್ನು ಅನುಸರಿಸುವುದನ್ನು ಖಾತ್ರಿಪಡಿಸುತ್ತದೆ ಮತ್ತು ವಿಶಿಷ್ಟ ಹೆಡರ್ ಗುಣಲಕ್ಷಣಗಳನ್ನು ಕಾಪಾಡುತ್ತದೆ?

**Ans**
- ✗ A. ಪ್ರತಿ ಹೆಡ್ಡರ್ ಮತ್ತು ಪ್ಯಾರಾಕ್ಕಾಗಿ, ಶೈಲಿಗಳನ್ನು ಬದಲಿಸದೆ ವಿನ್ಯಾಸವನ್ನು ಮ್ಯಾನುವಲ್ ಆಗಿ ಸರಿಹೊಂದಿಸಿ
- ✓ B. ಹೆಡ್ಡರ್ ಗಳಿಗೆ ಕಸ್ಟಮ್ ಶೈಲಿಯನ್ನು ಅನ್ವಯಿಸಿ, ಶೀರ್ಷಿಕೆಗಳ ಮೇಲೆ ಫಾರ್ಮ್ಯಾಟ್ ಪೇಂಟರ್ ಅನ್ನು ಮಾತ್ರ ಬಳಸಿ, ನಂತರ ಫಾರ್ಮ್ಯಾಟಿಂಗ್ ಅನ್ನು ತೆರವುಗೊಳಿಸಿ ಮತ್ತು ಬಾಧಿತ ಪ್ಯಾರಾಗಳಿಗೆ ಸುಸಂಗತ ಶೈಲಿಯನ್ನು ಅನ್ವಯಿಸಿ
- ✗ C. ಮುಖ್ಯ ಟೆಕ್ಸ್ಟ್ ನಿಂದ ಹೆಡ್ಡರ್ ಮತ್ತು ಪ್ಯಾರಾಗಳಿಗೆ ಫಾರ್ಮ್ಯಾಟಿಂಗ್ ಅನ್ನು ನಕಲಿಸಿ, ನಂತರ ಮ್ಯಾನುವಲ್ ಆಗಿ ಹೆಡ್ಡರ್ ಗಳನ್ನು ಸರಿಹೊಂದಿಸಿ
- ✗ D. ಎಲ್ಲಾ ವಿಷಯಕ್ಕೆ ಸಾಮಾನ್ಯ ಶೈಲಿಯನ್ನು ಅನ್ವಯಿಸಿ, ನಂತರ ಹೆಡರ್ ಫಾರ್ಮ್ಯಾಟಿಂಗ್ ಅನ್ನು ಪ್ರತ್ಯೇಕವಾಗಿ ಮರುಬಳಕೆ ಮಾಡಿ

**Q.29** ಒಂದು ಲಾಜಿಸ್ಟಿಕ್ಸ್ ಕಂಪನಿಯು ವಾಹನದ ನೈಜ-ಸಮಯದ ಡೇಟಾವನ್ನು ಟ್ರ್ಯಾಕ್ ಮಾಡಲು ಕಸ್ಟಮ್ ಸಾಧನವನ್ನು ವಿನ್ಯಾಸಗೊಳಿಸುತ್ತಿದ್ದು, ಅಲ್ಲಿ ತ್ವರಿತ ವಿಶ್ಲೇಷಣೆ ಮತ್ತು ನಿರ್ಧಾರ ತೆಗೆದುಕೊಳ್ಳುವುದು ನಿರ್ಣಾಯಕವಾಗಿದೆ. ರಾ ಸೆನ್ಸರ್ ಇನ್‌ಪುಟ್‌ಗಳನ್ನು ಪ್ರಕ್ರಿಯೆಗೊಳಿಸಲು ರೂಟ್ ಆಪ್ಟಿಮೈಸೇಶನ್ ಅಲ್ಗಾರಿದಮ್‌ಗಳನ್ನು ಕಾರ್ಯಗತಗೊಳಿಸುವ ಮತ್ತು ಇತರ ಉಪವ್ಯವಸ್ಥೆಗಳಿಗೆ ಔಟ್‌ಪುಟ್ ಅನ್ನು ಸಂಘಟಿಸುವ ಡಿವೈಸ್ ನ ಸಾಮರ್ಥ್ಯವನ್ನು ಯಾವ ಘಟಕದ ಆರ್ಕಿಟೆಕ್ಚರಲ್ ಆಯ್ಕೆಯು ಮೂಲಭೂತವಾಗಿ ನಿರ್ಧರಿಸುತ್ತದೆ?

**Ans**
- ✗ A. ಸ್ಟೋರೇಜ್ ಡಿವೈಸ್
- ✗ B. ವಿದ್ಯುತ್ ಪೂರೈಕೆ
- ✗ C. ಮೆಮೊರಿ
- ✓ D. ಸೆಂಟ್ರಲ್ ಪ್ರೊಸೆಸಿಂಗ್ ಯುನಿಟ್

**Q.30** ಸಂವಹನದ (communication) ಸಮಯದಲ್ಲಿ ದತ್ತಾಂಶ ಸಮಗ್ರತೆಯನ್ನು ಕಾಪಾಡಿಕೊಳ್ಳಲು ಡೇಟಾ ಎನ್‌ಕ್ರಿಪ್ಶನ್ ಹೇಗೆ ಕೊಡುಗೆ ನೀಡುತ್ತದೆ?

**Ans**
- ✗ A. ಇದು ಫೈಲ್‌ಗಳನ್ನು ಹಲವು ಸ್ಥಳಗಳಿಗೆ ಸುಲಭವಾಗಿ ಕಾಪಿ ಮಾಡಲು ಅನುವು ಮಾಡಿಕೊಡುತ್ತದೆ
- ✓ B. ಇದು ನೆಟ್‌ವರ್ಕ್‌ಾದ್ಯಂತ ವೇಗವಾಗಿ ಪ್ರಸರಣಕ್ಕಾಗಿ ಡೇಟಾವನ್ನು ಕಂಪ್ರೆಸ್ ಮಾಡುತ್ತದೆ
- ✗ C. ಇದು ಡೇಟಾವು ಅನಧಿಕೃತ ಮಾರ್ಪಾಡಾಗುವುದನ್ನು ಪತ್ತೆಹಚ್ಚಲು ಮತ್ತು ಸರಿಪಡಿಸಲು ಹೆಚ್ಚು ಕಷ್ಟಕರವಾಗಿಸುತ್ತದೆ
- ✗ D. ಇದು ನಿರ್ದಿಷ್ಟ ಬಳಕೆದಾರರಿಗೆ ಮಾತ್ರ ಡೇಟಾ ಫೈಲ್ ಗಳನ್ನು ಆಕ್ಸೆಸ್ ಮಾಡಲು ಅನುವು ಮಾಡಿಕೊಡುತ್ತದೆ

Blackbook

Get India's No 1 Vocab Preparation App for FREE : Blackbook : English Vocabulary
GET IT ON Google Play

**Q.31** ಒಂದು ಸಂಶೋಧನಾ ತಂಡವು ಆನುವಂಶಿಕ ಮಾದರಿಗಳನ್ನು ವಿಶ್ಲೇಷಿಸಲು ಕಸ್ಟಮ್ ಕಂಪ್ಯೂಟಿಂಗ್ ಸಾಧನವನ್ನು ವಿನ್ಯಾಸಗೊಳಿಸುತ್ತಿದೆ. ಮೂಲಮಾದರಿಯ ಪರೀಕ್ಷೆಯ ಸಮಯದಲ್ಲಿ, ಒಂದೇ ರೀತಿಯ ವಿಶ್ಲೇಷಣಾ ಅನುಕ್ರಮಗಳನ್ನು ನಿರ್ವಹಿಸುವಾಗ ಸಾಧನವು ಆಗಾಗ್ಗೆ ಅಸ್ಥಿರ ಫಲಿತಾಂಶಗಳನ್ನು ನೀಡುತ್ತದೆ. ಮುಖ್ಯ ಸಂಗ್ರಹಣೆ ಮತ್ತು ಪೆರಿಫೆರಲ್ ಹಾರ್ಡ್‌ವೇರ್ ಅನ್ನು ಸ್ವತಂತ್ರವಾಗಿ ಮೌಲ್ಯೀಕರಿಸಲಾಗಿದೆ ಎಂದು ಪರಿಗಣಿಸಿದರೆ, ಈ ಅಸಂಗತತೆಗೆ ಸೆಂಟ್ರಲ್ ಪ್ರೊಸೆಸಿಂಗ್ ಯೂನಿಟ್ ವಿನ್ಯಾಸದ ಯಾವ ನಿರ್ದಿಷ್ಟ ಅಂಶವು ಬಹುಶಃ ಕಾರಣವಾಗಿರಬಹುದು?

**Ans**
✔ A. ಕ್ಯಾಶ್ ಮೆಮೊರಿ ಮತ್ತು ಮೇನ್ ಸ್ಟೋರೇಜ್ ಇಂಟರ್ಫೇಸ್ ಗಳ ನಡುವಿನ ಸಮಯದ ಸರಿಹೊಂದಾಣಿಕೆ

✘ B. ಮೇನ್ ಸ್ಟೋರೇಜ್ ಇಂಟರ್ಫೇಸ್ ಸರ್ಕ್ಯೂಟ್ರಿಯೊಳಗಿನ ಬಫರಿಂಗ್ ಪ್ರಕ್ರಿಯೆ

✘ C. ಏಕಕಾಲಿಕ ಸೂಚನೆ ಕಾರ್ಯಗತಗೊಳಿಸುವಾಗ ಕಂಟ್ರೋಲ್ ಯೂನಿಟ್ ಮತ್ತು ಅರಿತ್ಮೆಟಿಕ್ ಲಾಜಿಕ್ ಘಟಕದ ನಡುವಿನ ಸಮನ್ವಯ

✘ D. ಬಸ್ ಆರ್ಬಿಟ್ರೇಷನ್ ಲಾಜಿಕ್ ಗೆ ಸಂಬಂಧಿಸಿದಂತೆ ಸೂಚನೆಗಳನ್ನು ಮೊದಲೇ ಪಡೆಯುವುದನ್ನು ನಿಗದಿಪಡಿಸುವುದು

**Q.32** ಆಧುನಿಕ ವ್ಯವಸ್ಥೆಗಳಲ್ಲಿ ಸಾಮಾನ್ಯವಾಗಿ ಬಳಸುವ ಸಿಮೆಟ್ರಿಕ್ ಎನ್‌ಕ್ರಿಪ್ಷನ್ ಅಲ್ಗಾರಿದಂಗೆ ಈ ಕೆಳಗಿನವುಗಳಲ್ಲಿ ಯಾವುದು ಉದಾಹರಣೆಯಾಗಿದೆ?

**Ans**
✘ A. ElGamal ಎನ್‌ಕ್ರಿಪ್ಷನ್

✘ B. SHA-256 ಫಂಕ್ಷನ್

✔ C. ಅಡ್ವಾನ್ಸ್ಡ್ ಎನ್‌ಕ್ರಿಪ್ಷನ್ ಸ್ಟ್ಯಾಂಡರ್ಡ್ (AES)

✘ D. RSA ಅಲ್ಗಾರಿದಂ

**Q.33** ಅಪ್ಲಿಕೇಶನ್‌ಗಳನ್ನು ಡೌನ್‌ಲೋಡ್ ಮಾಡುವಾಗ ಯಾವ ಕ್ರಮಗಳು ನಿಮ್ಮ ಸ್ಮಾರ್ಟ್‌ಫೋನ್‌ನ ಭದ್ರತೆಯೊಂದಿಗೆ ರಾಜಿ ಮಾಡಿಕೊಳ್ಳುವ ಸಾಧ್ಯತೆ ಕಡಿಮೆ ಇರುತ್ತದೆ?

**Ans**
✔ A. ಅಧಿಕೃತ ಆಪ್ ಸ್ಟೋರ್‌ನಿಂದ ಮಾತ್ರ ಡೌನ್‌ಲೋಡ್ ಮಾಡುವುದು ಮತ್ತು ಆಪ್ ಅನುಮತಿಗಳನ್ನು ಪರಿಶೀಲಿಸುವುದು

✘ B. ಅಪ್ಲಿಕೇಶನ್ ಇನ್‌ಸ್ಟಾಲ್ ಮಾಡುವ ಮೊದಲು ಭದ್ರತಾ ಸೆಟ್ಟಿಂಗ್‌ಗಳನ್ನು ನಿಷ್ಕ್ರಿಯಗೊಳಿಸುವುದು

✘ C. ಅಪ್ಲಿಕೇಶನ್‌ಗಳು ಕೋರುವ ಎಲ್ಲಾ ಅನುಮತಿಗಳನ್ನು ನೀಡುವುದು

✘ D. ಥರ್ಡ್ ಪಾರ್ಟಿ ಆಪ್ ಸ್ಟೋರ್‌ಗಳನ್ನು ಬಳಸುವುದು ಮತ್ತು ಅನುಮತಿಗಳನ್ನು ನಿರ್ಲಕ್ಷಿಸುವುದು

**Q.34** ಒಂದು ಮ್ಯೂಸಿಯಂನ ಡಿಜಿಟಲ್ ಸಂವಾದಾತ್ಮಕ ಕಿಯೋಸ್ಕ್‌ನಲ್ಲಿ, ಹೆಚ್ಚಿನ ಮಾಹಿತಿಯನ್ನು ಪ್ರದರ್ಶಿಸಲು ಸಂದರ್ಶಕರು ಚಿತ್ರಕಲೆಯನ್ನು ಆಯ್ಕೆ ಮಾಡುತ್ತಾರೆ. ಯಾವ ಸಾಧನವು ಅವರಿಗೆ ತಮ್ಮ ಆಯ್ಕೆಯನ್ನು ಮಾಡಲು ಹೆಚ್ಚು ಅನುಕೂಲ ಮಾಡಿಕೊಡುತ್ತದೆ?

**Ans**
✘ A. ವೈರ್‌ಲೆಸ್ ಕೀಬೋರ್ಡ್ ಇನ್‌ಪುಟ್

✘ B. ಬಾರ್ ಕೋಡ್ ಸ್ಕ್ಯಾನರ್ ಡಿವೈಸ್

✔ C. ಟಚ್-ಎನೇಬಲ್ಡ್ ಸ್ಕ್ರೀನ್ ಪ್ಯಾನಲ್

✘ D. ಥರ್ಮಲ್ ರಿಸೀಟ್ ಪ್ರಿಂಟರ್

**Q.35** ಹೊಸದಾಗಿ ವಿನ್ಯಾಸಗೊಳಿಸಲಾದ ಆಪರೇಟಿಂಗ್ ಸಿಸ್ಟಂನಲ್ಲಿ, 'ಕ್ವಿಕ್‌ಸ್ವಿಚ್' ಎಂಬ ಅಪ್ಲಿಕೇಶನ್, ಬಳಕೆದಾರರು 'ಫೋಕಸ್ ಮೋಡ್' ಅನ್ನು ಸಕ್ರಿಯಗೊಳಿಸಿದಾಗ, ಟಾಸ್ಕ್ ಬಾರ್‌ನ ಬಲ ತುದಿಯಿಂದ ಮಿನಿಮೈಸ್ ಮಾಡಿದ ಐಕಾನ್‌ಗಳನ್ನು ಸ್ಟಾರ್ಟ್ ಮೆನುವಿನೊಳಗಿನ ಕಾಂಟೆಕ್ಸ್ಚುವಲ್ ಗ್ರೂಪ್ ಗೆ ತಕ್ಷಣ ಸ್ಥಳಾಂತರಿಸುವುದಾಗಿ ಹೇಳಿಕೊಳ್ಳುತ್ತದೆ. 'ಫೋಕಸ್ ಮೋಡ್' ಅನ್ನು ಸಕ್ರಿಯಗೊಳಿಸಿದ ನಂತರ, ಎಲ್ಲಾ ಮಿನಿಮೈಸ್ ಮಾಡಿದ ಐಕಾನ್‌ಗಳು ಟಾಸ್ಕ್ ಬಾರ್‌ನಿಂದ ಕಣ್ಮರೆಯಾಗಿರುವುದನ್ನು ಬಳಕೆದಾರರು ಗಮನಿಸುತ್ತಾರೆ, ಆದರೆ ಅವುಗಳ ಸಬ್ ಸೆಟ್ ಮಾತ್ರ ಸ್ಟಾರ್ಟ್ ಮೆನುವಿನ ಗುಂಪಿನಲ್ಲಿ ಕಾಣಿಸಿಕೊಳ್ಳುತ್ತದೆ. ಈ ಸೆಲೆಕ್ಟಿವ್ ರೀಲೊಕೇಶನ್ ಗೆ ಯಾವ ವಿವರಣೆಯು ಹೆಚ್ಚು ನಿಖರವಾಗಿ ಕಾರಣವಾಗಿದೆ?

**Ans**
✔ A. ಬ್ಯಾಕ್ ಗ್ರೌಂಡ್ ಸರ್ವಿಸ್ ಗಳನ್ನು ಪ್ರತಿನಿಧಿಸುವ ಮಿನಿಮೈಸ್ ಮಾಡಿದ ಐಕಾನ್‌ಗಳನ್ನು 'ಕ್ವಿಕ್‌ಸ್ವಿಚ್' ಮೂಲಕ ಸ್ಟಾರ್ಟ್ ಮೆನು ಗುಂಪಿಗೆ ಸರಿಸಲಾಗುವುದಿಲ್ಲ

✘ B. ಟಾಸ್ಕ್ ಬಾರ್ ಈಗಾಗಲೇ ತುಂಬಿರುವ ಕಾರಣ, ಕೆಲವು ಮಿನಿಮೈಸ್ ಮಾಡಿದ ಐಕಾನ್‌ಗಳನ್ನು ಮಾತ್ರ ಸ್ಟಾರ್ಟ್ ಮೆನು ಗುಂಪಿಗೆ ವರ್ಗಾಯಿಸಬಹುದು

✘ C. ಯೂಸರ್ ಪರ್ಮಿಷನ್ ಸೆಟ್ಟಿಂಗ್‌ಗಳು ಕೆಲವು ಮಿನಿಮೈಸ್ಡ್ ವಿಂಡೋಸ್ ಅನ್ನು ಸ್ಟಾರ್ಟ್ ಮೆನು ಗುಂಪಿಗೆ ಸ್ಥಳಾಂತರಿಸುವುದನ್ನು ತಡೆಯುತ್ತವೆ

✘ D. ಮಿನಿಮೈಸ್ ವಿಂಡೋಸ್ ಗಳನ್ನು ಫೋಕಸ್ ಮೋಡ್ ನಲ್ಲಿ ಅನುಮತಿಸಲಾಗುವುದಿಲ್ಲ, ಆದ್ದರಿಂದ ಎಲ್ಲವನ್ನೂ ಸ್ಟಾರ್ಟ್ ಮೆನು ಗುಂಪಿನಿಂದ ತೆಗೆದುಹಾಕಬೇಕು

Blackbook

Get India's No 1 Vocab Preparation App for FREE : **Blackbook : English Vocabulary** GET IT ON Google Play

**Q.36** **ಕಂಪನಿ ಸುದ್ದಿಪತ್ರದಲ್ಲಿ, ಸಂಪಾದಕರು ವಿಷಯದ ಹರಿವನ್ನು ಮುರಿಯದೆ ಅಥವಾ ಹೆಚ್ಚುವರಿ ಚಿಹ್ನೆಗಳನ್ನು ಇನ್ಸರ್ಟ್ ಮಾಡದೇ ದೀರ್ಘವಾದ ಪ್ಯಾರಾಗ್ರಾಫ್‌ನಲ್ಲಿ ಮುಖ್ಯ ಸಂದೇಶವನ್ನು ಸೂಕ್ಷ್ಮವಾಗಿ ಹೇಗೆ ಒತ್ತಿಹೇಳಬಹುದು?**

**Ans**
- ❌ A. ಪ್ಯಾರಾದ ಆರಂಭದಲ್ಲಿ ಹೆಚ್ಚುವರಿ ಟ್ಯಾಬ್ ಅನ್ನು ಸೇರಿಸುವುದು
- ❌ B. ಇಡೀ ಪ್ಯಾರಾದಲ್ಲಿ ಅಕ್ಷರಶೈಲಿಯನ್ನು ದೊಡ್ಡಕ್ಷರಕ್ಕೆ ಬದಲಿಸುವುದು
- ❌ C. ಗಮನಕ್ಕಾಗಿ ಪ್ಯಾರಾವನ್ನು ಎಡ ಅಂಚಿಗೆ ಬದಲಾಯಿಸುವುದು
- ✔ D. ಸ್ಫುಟತೆಗಾಗಿ ಅನುಕ್ರಮವಾದ ಪ್ರತ್ಯೇಕತೆಯನ್ನು ರಚಿಸಿ ಸಾಲಿನ ಅಂತರವನ್ನು ಹೊಂದಿಸಿ ಒತ್ತು ನೀಡುವುದು

**Q.37** **ಸ್ಪ್ರೆಡ್‌ಶೀಟ್‌ನಲ್ಲಿ ಡಿಜಿಟಲ್ ಇನ್ವೆಂಟರಿ ಶೀಟ್ ತಯಾರಿಸುವಾಗ, ಪ್ರಿಯಾ ಅವರು ಸಾಗಣೆ ದಿನಾಂಕ (08-06-2024 ರಂತೆ) ಮತ್ತು ಪ್ರಮಾಣ (0075 ರಂತೆ) ಎರಡನ್ನೂ ಪಕ್ಕದ ಸೆಲ್ ಗಳಲ್ಲಿ ದಾಖಲಿಸಲು ಬಯಸುತ್ತಾರೆ. ಎರಡೂ ನಮೂದುಗಳಿಗೆ MS ಎಕ್ಸೆಲ್‌ನಲ್ಲಿ ಅನಿರೀಕ್ಷಿತ ಸ್ವಯಂ-ಫಾರ್ಮ್ಯಾಟಿಂಗ್ ಸಮಸ್ಯೆಗಳನ್ನು ಯಾವ ವಿಧಾನವು ಉತ್ತಮವಾಗಿ ತಪ್ಪಿಸುತ್ತದೆ?**

**Ans**
- ✔ A. ಮೂಲ ಸ್ವರೂಪವನ್ನು ಉಳಿಸಿಕೊಳ್ಳಲು ಪ್ರತಿ ಪ್ರವೇಶದ ಮೊದಲು ಲೋಪಚಿಹ್ನೆ (apostrophe) ಅನ್ನು ನಮೂದಿಸುವುದು
- ❌ B. ನಮೂದಿಸುವ ಮೊದಲು ಎರಡೂ ಕೋಶಗಳನ್ನು 'ಜನರಲ್' ಎಂದು ಫಾರ್ಮ್ಯಾಟ್ ಮಾಡುವುದು
- ❌ C.
ಮತ್ತೊಂದು ಹಾಳೆಯನ್ನು ಉಲ್ಲೇಖಿಸುವ ಸೂತ್ರಗಳನ್ನು ಬಳಸಿ ಎರಡೂ ಮೌಲ್ಯಗಳನ್ನು ಸೇರಿಸುವುದು
- ❌ D. ದಿನಾಂಕವನ್ನು 08-06-2024 ಮತ್ತು ಸಂಖ್ಯೆಯನ್ನು ನೇರವಾಗಿ 0075 ಎಂದು ಟೈಪ್ ಮಾಡುವುದು

**Q.38** **ಒಬ್ಬ ಬಳಕೆದಾರನು PDF ಡಾಕ್ಯುಮೆಂಟ್ ಅನ್ನು ಸ್ಲೈಡ್‌ಗೆ ಇನ್ಸರ್ಟ್ ಮಾಡಲು ಬಯಸುತ್ತಾನೆ. ಪ್ರಸ್ತುತಪಡಿಸುವ ಸಮಯದಲ್ಲಿ ಇದು ವೀಕ್ಷಕರಿಗೆ ಫೈಲ್ ಅನ್ನು ತೆರೆಯಲು ಅನುವು ಮಾಡಿಕೊಡುತ್ತದೆ. ಇದನ್ನು ಯಾವ ಆಯ್ಕೆಯು ಉತ್ತಮವಾಗಿ ಸಾಧಿಸುತ್ತದೆ?**

**Ans**
- ✔ A. 'ಇನ್ಸರ್ಟ್ ಆಬ್ಜೆಕ್ಟ್' ಬಳಸಿ PDF ಅನ್ನು ಒಂದು ಆಬ್ಜೆಕ್ಟ್ ಆಗಿ ಸೇರಿಸಿ ಮತ್ತು 'ಕ್ರಿಯೇಟ್ ಫ್ರಮ್ ಫೈಲ್' ಆಯ್ಕೆ ಮಾಡುವುದು
- ❌ B. 'ಇನ್ಸರ್ಟ್ ಮೀಡಿಯಾ'ದ ಮೂಲಕ PDF ಅನ್ನು ಇನ್ಸರ್ಟ್ ಮಾಡುವುದು
- ❌ C. 'ಇನ್ಸರ್ಟ್ ಹೈಪರ್ ಲಿಂಕ್' ಬಳಸಿ PDF ಗೆ ಹೈಪರ್ ಲಿಂಕ್ ಸೇರಿಸುವುದು
- ❌ D. 'ಇನ್ಸರ್ಟ್ ಪಿಕ್ಚರ್' ಬಳಸಿ PDF ಅನ್ನು ಪಿಕ್ಚರ್ ಆಗಿ ಇನ್ಸರ್ಟ್ ಮಾಡುವುದು

**Q.39** **ಕೇಬಲ್ ಇಂಟರ್‌ನೆಟ್ ಸಂಪರ್ಕಕ್ಕೆ ಹೋಲಿಸಿದರೆ ಫೈಬರ್-ಆಪ್ಟಿಕ್ ಇಂಟರ್‌ನೆಟ್ ಸಂಪರ್ಕದ ಪ್ರಮುಖ ಪ್ರಯೋಜನವೇನು?**

**Ans**
- ❌ A. ಗೇಮಿಂಗ್‌ಗೆ ಹೆಚ್ಚಿನ ವಿಶ್ವಾಸಾರ್ಹತೆ
- ❌ B. ಉತ್ತಮ ಶಕ್ತಿ (energy) ದಕ್ಷತೆ
- ✔ C. ಹೆಚ್ಚಿನ ಡೇಟಾ ಟ್ರಾನ್ಸ್‌ಮಿಷನ್ ವೇಗಗಳು
- ❌ D. ಗೃಹ ಬಳಕೆದಾರರಿಗೆ ಕಡಿಮೆ ವೆಚ್ಚ

**Q.40** **ಮನೆಯಲ್ಲಿ ಇಂಟರ್ನೆಟ್‌ಗೆ ಸಂಪರ್ಕ ಕಲ್ಪಿಸುವಾಗ, ನಿಮ್ಮ ಸ್ಥಳೀಯ ನೆಟ್‌ವರ್ಕ್ ಮತ್ತು ಇಂಟರ್ನೆಟ್ ಸೇವಾ ಪೂರೈಕೆದಾರರ ನಡುವೆ ಸಾಮಾನ್ಯವಾಗಿ ಯಾವ ಹಾರ್ಡ್‌ವೇರ್ ಸಾಧನವು ಗೇಟ್‌ವೇ ಆಗಿ ಕಾರ್ಯನಿರ್ವಹಿಸುತ್ತದೆ?**

**Ans**
- ❌ A. ಮೋಡೆಮ್
- ✔ B. ರೌಟರ್
- ❌ C. ಸ್ವಿಚ್
- ❌ D. ಹಬ್

**Q.41** **ಒಬ್ಬ ಸಂಶೋಧನಾ ಸಸ್ಯವಿಜ್ಞಾನಿಯು ಕಂಪ್ಯೂಟರ್ ತಂತ್ರಾಂಶವನ್ನು ಬಳಸಿ ಸಾವಿರಾರು ಸಸ್ಯಗಳ DNA ಅನುಕ್ರಮಗಳನ್ನು ವಿಶ್ಲೇಷಿಸಲು ಯೋಜಿಸುತ್ತಾನೆ. ಈ ಸನ್ನಿವೇಶದಲ್ಲಿ, ಆಧುನಿಕ ಜೀವಶಾಸ್ತ್ರದ ಸಂಶೋಧನೆಗೆ ಕಂಪ್ಯೂಟರ್‌ಗಳು ಯಾಕೆ ಅತ್ಯಗತ್ಯ ಎಂಬುದನ್ನು ಯಾವ ಅಂಶವು ಅತ್ಯಂತ ಉತ್ತಮವಾಗಿ ವಿವರಿಸುತ್ತದೆ?**

**Ans**
- ❌ A. ಅವು ದೀರ್ಘಕಾಲೀನ ಆರ್ಕೈವ್‌ಗಳಿಗಾಗಿ ಡಿಜಿಟಲ್ ಫೈಲ್‌ಗಳನ್ನು ಸಂಘಟಿಸುತ್ತವೆ
- ❌ B. ಅವು ಸಂಶೋಧಕರಿಗೆ ಮೂಲಭೂತ ಲ್ಯಾಬ್ ಉಪಕರಣಗಳ ನಿಯಂತ್ರಣವನ್ನು ಸ್ವಯಂಚಾಲಿತಗೊಳಿಸುತ್ತವೆ
- ❌ C. ಅವು ಪ್ರಯೋಗಗಳ ಸಮಯದಲ್ಲಿ ದೋಷ-ಮುಕ್ತ ಡೇಟಾ ಸಂಗ್ರಹಣೆಯನ್ನು ಖಚಿತಪಡಿಸುತ್ತವೆ
- ✔ D. ಅವು ವ್ಯಾಪಕ ಆನುವಂಶಿಕ ಡೇಟಾಸೆಟ್ ಗಳ ತ್ವರಿತ ಸಂಸ್ಕರಣೆಗೆ ಅನುವು ಮಾಡಿಕೊಡುತ್ತವೆ

**Q.42** **ಸಂಸ್ಥೆಗಳಲ್ಲಿ ಕಂಪ್ಯೂಟರ್ ಸುರಕ್ಷತಾ ಕ್ರಮಗಳನ್ನು ಜಾರಿಗೆ ತರಲು ಮುಖ್ಯ ಕಾರಣವೇನು?**

**Ans**
- ✔ A. ಸೂಕ್ಷ್ಮ ಮಾಹಿತಿಯನ್ನು ಅನಧಿಕೃತ ಪ್ರವೇಶದಿಂದ ರಕ್ಷಿಸಲು
- ❌ B. ತಂತ್ರಾಂಶ ನವೀಕರಣಗಳನ್ನು ಸುಲಭವಾಗಿ ನಿರ್ವಹಿಸಲು
- ❌ C. ಸಾಧನಗಳಲ್ಲಿ ವಿದ್ಯುತ್ ಬಳಕೆಯನ್ನು ಕಡಿಮೆ ಮಾಡಲು
- ❌ D. ಕಂಪ್ಯೂಟರ್ ನ ವೇಗ ಮತ್ತು ಕಾರ್ಯಕ್ಷಮತೆಯನ್ನು ಸುಧಾರಿಸಲು

Blackbook
Get India's No 1 Vocab Preparation App for FREE : Blackbook : English Vocabulary
GET IT ON Google Play

**Q.43** ವಿವಿಧ ಯೂಸರ್ ಪ್ರೊಫೈಲುಗಳನ್ನು ಹೊಂದಿರುವ ಒಂದು ಡೆಸ್ಕ್ ಟಾಪ್ ಕಂಪ್ಯೂಟರ್‌ನಲ್ಲಿ ಒಂದು ಹೊಸ ಪ್ರಾಡಕ್ಟಿವಿಟಿ ಸೂಟ್ ಅನ್ನು ಇನ್ಸ್ಟಾಲ್ ಮಾಡಿರುವುದನ್ನು ಕಲ್ಪಿಸಿಕೊಳ್ಳೋಣ. ಒಂದು ವೇಳೆ ಬಳಕೆದಾರರು ಇತರ ಯೂಸರ್ ಸೆಟ್ಟಿಂಗ್‌ಗಳಿಗೆ ಅಡ್ಡಿಯಾಗದಂತೆ ಸ್ಪ್ರೆಡ್‌ಶೀಟ್ ಟೂಲ್ ಅನ್ನು ತೆರೆಯಲು ಬಯಸಿದರೆ, ಯಾವ ಕ್ರಿಯೆಯು ಇದನ್ನು ಉತ್ತಮವಾಗಿ ನಿರ್ವಹಿಸುತ್ತದೆ?

**Ans**
- ✗ A. ಎಂದಿನಂತೆ ಡೆಸ್ಕ್‌ಟಾಪ್ ಶಾರ್ಟ್‌ಕಟ್‌ನಿಂದ ಅಪ್ಲಿಕೇಶನ್ ಅನ್ನು ಪ್ರಾರಂಭಿಸಿ
- ✓ B. ಅಪ್ಲಿಕೇಶನ್ ಅನ್ನು ಪ್ರಾರಂಭಿಸಲು ಆಪರೇಟಿಂಗ್ ಸಿಸ್ಟಂನ 'ರನ್ ಆ್ಯಸ್ ಡಿಫರೆಂಟ್ ಯೂಸರ್' ಕಾರ್ಯವನ್ನು ಬಳಸಿ.
- ✗ C. ಸ್ಟಾರ್ಟ್ ಮೆನುವಿನಿಂದ ಅಪ್ಲಿಕೇಶನ್ ಅನ್ನು ಸೇಫ್ ಮೋಡ್‌ನಲ್ಲಿ ತೆರೆಯಲು ಹೊಂದಿಸಿ
- ✗ D. ತೆರೆಯುವ ಮೊದಲು ಅಪ್ಲಿಕೇಶನ್‌ನ ಕಾಂಪ್ಯಾಟಿಬಿಲಿಟಿ ಮೋಡ್ ಅನ್ನು ಹೊಂದಿಸಿ

**Q.44** ಒಂದು ತಂಡವು MS ವರ್ಡ್ ನಲ್ಲಿ ದ್ವಿಭಾಷಾ ಸುದ್ದಿಪತ್ರವನ್ನು ರಚಿಸುತ್ತಿದೆ. ಇದಕ್ಕೆ ಇಂಗ್ಲಿಷ್ ಮತ್ತು ಜಪಾನೀಸ್ ಎರಡೂ ಭಾಷೆಗಳ ಟೆಕ್ಸ್ಟ್ ಬ್ಲಾಕ್‌ಗಳ ಅವಶ್ಯಕತೆಯಿದೆ. ಡಾಕ್ಯುಮೆಂಟ್‌ನ ನೋಟವನ್ನು ಸರಿಹೊಂದಿಸುವಾಗ, ಮಿಡ್ ಡಾಕ್ಯುಮೆಂಟ್‌ನಲ್ಲಿ ಪೋರ್ಟ್ರೇಟ್‌ನಿಂದ ಲ್ಯಾಂಡ್‌ಸ್ಕೇಪ್ ಓರಿಯಂಟೇಶನ್‌ಗೆ ಬದಲಾಯಿಸಿದ ನಂತರ, ಕೆಲವು ಪುಟಗಳಲ್ಲಿನ ಪುಟದ ಸಂಖ್ಯೆಗಳು ತಮ್ಮ ಸ್ಥಾನವನ್ನು ಬದಲಾಯಿಸುವುದನ್ನು ಮತ್ತು ಮುಖ್ಯ ವಿಷಯದ ಮೇಲೆ ಅತಿಕ್ರಮಿಸುವುದನ್ನು (overlap) ತಂಡ ಗಮನಿಸುತ್ತದೆ. ಈ ನಿರ್ದಿಷ್ಟ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ಪರಿಹರಿಸಲು ಅವರು ಯಾವ ಪುಟ ವಿನ್ಯಾಸದ ವೈಶಿಷ್ಟ್ಯಕ್ಕೆ (page formatting feature) ಆದ್ಯತೆ ನೀಡಬೇಕು?

**Ans**
- ✗ A. ಡಿಫಾಲ್ಟ್ ಮಾರ್ಜಿನ್ ಸೆಟಿಂಗ್ಸ್ ಗಳನ್ನು ಇಟ್ಟುಕೊಂಡು ಸೆಕ್ಷನ್ ಬ್ರೇಕ್ ಗಳನ್ನು ಇನ್ಸರ್ಟ್ ಮಾಡಿ
- ✗ B. ಎಲ್ಲಾ ಪುಟಗಳಿಗೆ ಮುಖ್ಯ ಟೆಕ್ಸ್ಟ್ ಮಾರ್ಜಿನ್ ಗಳನ್ನು ಹೊಂದಿಸಿ
- ✓ C. ಬಾಧಿತವಾದ ವಿಭಾಗಗಳಿಗೆ ಹೆಡರ್ ಮತ್ತು ಫೂಟರ್ ಮಾರ್ಜಿನ್ ಗಳನ್ನು ಹೊಂದಿಸಿ
- ✗ D. ಸಂಪೂರ್ಣ ಡಾಕ್ಯುಮೆಂಟ್ ಅನ್ನು ಸಿಂಗಲ್ ಪೇಜ್ ಓರಿಯಂಟೇಷನ್ ಗೆ ಬದಲಾಯಿಸಿ

**Q.45** MS ಪವರ್‌ಪಾಯಿಂಟ್‌ನಲ್ಲಿ ಪ್ರೆಸೆಂಟೇಷನ್ ನೀಡುವಾಗ ಸ್ಪೀಕರ್ ನ ಟಿಪ್ಪಣಿ (speaker notes) ಗಳನ್ನು ವೀಕ್ಷಿಸಲು ಮುಖ್ಯವಾಗಿ ಯಾವ ಆಯ್ಕೆಯನ್ನು ಬಳಸಲಾಗುತ್ತದೆ?

**Ans**
- ✓ A. ನೋಟ್ಸ್ ಪೇಜ್ ವ್ಯೂ
- ✗ B. ರೀಡಿಂಗ್ ವ್ಯೂ
- ✗ C. ಔಟ್ ಲೈನ್ ವ್ಯೂ
- ✗ D. ಸ್ಲೈಡ್ ಶೋ ವ್ಯೂ

## Section : **Mathematics**

**Q.46** ಒಂದು ಉತ್ಪಾದನಾ ಘಟಕವು ಐದು ಬೇರೆ ಬೇರೆ ಪಾಳಿಗಳಲ್ಲಿ ಮಿಲಿಮೀಟರ್ ಗಳಲ್ಲಿ ಅಳೆಯಲಾಗುವ ಉದ್ದಗಳಲ್ಲಿ ಸಾಧನಗಳನ್ನು ತಯಾರಿಸುತ್ತದೆ. ಪ್ರತಿ ಪಾಳಿಯಲ್ಲಿ ದಾಖಲಿಸಲಾದ ಉದ್ದಗಳು ಹೀಗಿವೆ:

ಪಾಳಿ 1: 45 mm, 48 mm, 43 mm
ಪಾಳಿ 2: 50 mm, 52 mm, 49 mm
ಪಾಳಿ 3: 47 mm, 45 mm, 51 mm
ಪಾಳಿ 4: 46 mm, 50 mm, 48 mm
ಪಾಳಿ 5: 49 mm, 47 mm, 44 mm

ಇಡೀ ದತ್ತಾಂಶ ಗಣದ ವ್ಯಾಪ್ತಿಯನ್ನು (range) ಕಂಡುಹಿಡಿಯಿರಿ.

**Ans**
- ✗ A. 7 mm
- ✗ B. 8 mm
- ✓ C. 9 mm
- ✗ D. 10 mm

**Q.47** $A = \{2, 4, 6, \ldots, 20\}$, $B = \{3, 6, 9, \ldots, 30\}$ ಆಗಿದ್ದರೆ, $A - B$ ಯಲ್ಲಿರುವ ಧಾತುಗಳ ಸಂಖ್ಯೆ ಇದಾಗಿದೆ:

**Ans**
- ✗ A. 6
- ✗ B. 9
- ✗ C. 8
- ✓ D. 7

Blackbook

Get India's No 1 Vocab Preparation App for FREE : Blackbook : English Vocabulary

GET IT ON Google Play

Q.48 14 ಮಾಪನಾಂಕಗಳನ್ನು ಹೊಂದಿರುವ I ನೇ ದತ್ತಾಂಶ ಗಣದ ವಿಪಲ್ಲಟ (variance) 6.76 ಆಗಿದೆ. I ನೇ ದತ್ತಾಂಶ ಗಣದ ಪ್ರತಿಯೊಂದು ಮಾಪನಾಂಕವನ್ನು 9 ರಿಂದ ಗುಣಿಸುವ ಮೂಲಕ II ನೇ ದತ್ತಾಂಶ ಗಣವನ್ನು ಪಡೆಯಲಾಗಿದೆ ಮತ್ತು I ನೇ ದತ್ತಾಂಶ ಗಣದ ಪ್ರತಿಯೊಂದು ಮಾಪನಾಂಕಕ್ಕೆ 7 ಅನ್ನು ಕೂಡಿಸುವ ಮೂಲಕ III ನೇ ದತ್ತಾಂಶ ಗಣವನ್ನು ಪಡೆಯಲಾಗಿದೆ. II ನೇ ಮತ್ತು III ನೇ ದತ್ತಾಂಶ ಗಣಗಳ ಸರಾಸರಿ ಮಾನಕ ವಿಚಲನೆಯನ್ನು ಕಂಡುಹಿಡಿಯಿರಿ.

Ans
- ✗ A. 8.7
- ✗ B. 16.5
- ✓ C. 13
- ✗ D. 10.4

Q.49 ಸರಳೀಕರಿಸಿ : $\dfrac{(\cos\theta - \sin\theta)(1 + \tan\theta + \cot\theta)}{1 + \sin\theta\cos\theta}$

Ans
- ✓ A. cosec θ − sec θ
- ✗ B. cosec θ + sec θ
- ✗ C. sec θ − cosec θ
- ✗ D. cos θ + sin θ

Q.50 10 ಧಾತು (element) ಗಳನ್ನು ಹೊಂದಿರುವ ಒಂದು ಗಣದ ಸೂಕ್ತ ಅಶೂನ್ಯ ಉಪಗಣಗಳ (proper non-empty subsets) ಸಂಖ್ಯೆ ಇಷ್ಟಿರುತ್ತದೆ:

Ans
- ✓ A. 1022
- ✗ B. 1021
- ✗ C. 1020
- ✗ D. 1023

Q.51 5 + 2√3 ಮತ್ತು 5 - 2√3 ರ ಮೂಲಗಳನ್ನು ಹೊಂದಿರುವ ವರ್ಗೀಯ ಸಮೀಕರಣವನ್ನು ಕಂಡುಹಿಡಿಯಿರಿ.

Ans
- ✗ A. $x^2 + 10x + 13 = 0$
- ✗ B. $x^2 - 12x + 13 = 0$
- ✓ C. $x^2 - 10x + 13 = 0$
- ✗ D. $x^2 + 12x + 13 = 0$

Q.52 5, 15.5 ಮತ್ತು 0.83 ಎಂಬ ಸಂಖ್ಯೆಗಳ ಲ.ಸಾ.ಅ. ಎಷ್ಟು?

Ans
- ✓ A. 12865
- ✗ B. 12780
- ✗ C. 12555
- ✗ D. 12695

Q.53 ಎರಡು ಸಮರೂಪ ತ್ರಿಭುಜಗಳ ಬಾಹುಗಳು 4 : 7 ರ ಅನುಪಾತದಲ್ಲಿವೆ. ಒಂದು ವೇಳೆ ಸಣ್ಣ ತ್ರಿಭುಜದ ವಿಸ್ತೀರ್ಣವು 144 $cm^2$ ಆಗಿದ್ದರೆ, ದೊಡ್ಡ ತ್ರಿಭುಜದ ವಿಸ್ತೀರ್ಣವನ್ನು ಕಂಡುಹಿಡಿಯಿರಿ.

Ans
- ✓ A. 441 $cm^2$
- ✗ B. 484 $cm^2$
- ✗ C. 454 $cm^2$
- ✗ D. 480 $cm^2$

Q.54 ಒಂದು ಸಮಾಂತರ ಶ್ರೇಢಿಯ 10ನೇ ಪದವು 20 ಆಗಿದ್ದರೆ ಮತ್ತು ಸಾಮಾನ್ಯ ವ್ಯತ್ಯಾಸವು 2 ಆಗಿದ್ದರೆ, ಸಮಾಂತರ ಶ್ರೇಢಿಯ 15ನೇ ಪದವನ್ನು ಕಂಡುಹಿಡಿಯಿರಿ.

Ans
- ✓ A. 30
- ✗ B. 35
- ✗ C. 40
- ✗ D. 32

Blackbook

Get India's No 1 Vocab Preparation App for FREE : **Blackbook : English Vocabulary**  GET IT ON Google Play

Q.55 ಒಂದು ನೇರ ವೃತ್ತಪಾದ ಶಂಕುವಿನ ಪಾದದ ತ್ರಿಜ್ಯವು 4.2 cm ಆಗಿದೆ ಮತ್ತು ಶಂಕುವಿನ ಎತ್ತರವು 30 cm ಆಗಿದೆ. ಈ ಪಾದಕ್ಕೆ ಸಮಾನಾಂತರವಾಗಿ ಶಂಕುವಿನ ಎತ್ತರದ ಮಧ್ಯಬಿಂದುವಿನಲ್ಲಿ ಒಂದು ಅಡ್ಡಛೇದನವನ್ನು ಮಾಡಲಾಗಿದೆ. ಈ ಅಡ್ಡಛೇದನ ಮತ್ತು ಶೃಂಗದ ನಡುವೆ ಇರುವ ಸಣ್ಣ ಶಂಕುವಿನ ಘನಫಲವನ್ನು ಕಂಡುಹಿಡಿಯಿರಿ. (π = 22/7 ಬಳಸಿ)

Ans
- ✔ A. 69.3 $cm^3$
- ✗ B. 138.6 $cm^3$
- ✗ C. 207.9 $cm^3$
- ✗ D. 277.2 $cm^3$

Q.56 ಒಂದು ವೇಳೆ $\cot(A-B)=\sqrt{3}$ ಆಗಿದ್ದರೆ, $\frac{\cot B-\cot A}{\cot A\cot B+1}+\frac{\tan A-\tan B}{1+\tan A\tan B}$ ನ ಮೌಲ್ಯವನ್ನು ಕಂಡುಹಿಡಿಯಿರಿ.

Ans
- ✔ A. $\frac{2\sqrt{3}}{3}$
- ✗ B. $\frac{1}{\sqrt{3}}$
- ✗ C. $\frac{3\sqrt{3}+2}{2}$
- ✗ D. $\frac{2-\sqrt{3}}{3}$

Q.57 ಒಂದು ವೇಳೆ $x^2 + ax + b = 0$ ಮತ್ತು $x^2 + bx + a = 0$ ಗಳು ನಿಖರವಾಗಿ ಒಂದೇ ಸಾಮಾನ್ಯ ಮೂಲವನ್ನು ಹೊಂದಿದ್ದರೆ a ಮತ್ತು b ನಡುವಿನ ಸಂಬಂಧವೇನು?

Ans
- ✗ A. a - b = 0
- ✗ B. a + b = 0
- ✗ C. a + b = 1
- ✔ D. a + b = -1

Q.58 ಒಂದು ಸಮಾಂತರ ಶ್ರೇಢಿಯ 5ನೇ ಪದವು 20 ಆಗಿದ್ದು, ಮೊದಲ 10 ಪದಗಳ ಮೊತ್ತವು 290 ಆಗಿದೆ. ಹಾಗಾದರೆ ಸಮಾಂತರ ಶ್ರೇಢಿಯ ಮೊದಲ ಪದವನ್ನು ಮತ್ತು ಸಾಮಾನ್ಯ ವ್ಯತ್ಯಾಸವನ್ನು ಕಂಡುಹಿಡಿಯಿರಿ.

Ans
- ✗ A. 52 ಮತ್ತು 18
- ✗ B. 58 ಮತ್ತು 10
- ✔ C. -52 ಮತ್ತು 18
- ✗ D. -29 ಮತ್ತು 9

Q.59 ಎರಡು ಸಂಖ್ಯೆಗಳ ಮ.ಸಾ.ಅ ಮತ್ತು ಲ.ಸಾ.ಅ ಕ್ರಮವಾಗಿ 14 ಮತ್ತು 420 ಆಗಿದೆ. ಅವುಗಳಲ್ಲಿ ಒಂದು ಸಂಖ್ಯೆಯು 84 ಆಗಿದ್ದರೆ, ಮತ್ತೊಂದು ಸಂಖ್ಯೆಯನ್ನು ಕಂಡುಹಿಡಿಯಿರಿ.

Ans
- ✗ A. 56
- ✗ B. 60
- ✔ C. 70
- ✗ D. 98

Q.60 A(2,3) ಮತ್ತು B(x,y) ಆಗಿದ್ದು, P(4,5) ಬಿಂದುವು AB ಯನ್ನು ಆಂತರಿಕವಾಗಿ 1:1 ಅನುಪಾತದಲ್ಲಿ ವಿಭಜಿಸುತ್ತದೆ. ಹಾಗಾದರೆ (x,y) ನಿರ್ದೇಶಾಂಕಗಳು ಯಾವುವು?

Ans
- ✔ A. (6,7)
- ✗ B. (5,6)
- ✗ C. (2,5)
- ✗ D. (3,4)

Blackbook

Get India's No 1 Vocab Preparation App for FREE : Blackbook : English Vocabulary

GET IT ON Google Play

**Q.61** ಆಯತಾಕಾರದ ಮುಚ್ಚಿದ ಪೆಟ್ಟಿಗೆಯು 7500 $cm^3$ ಘನಫಲವನ್ನು ಹೊಂದಿದೆ ಮತ್ತು ಅದರ ಅಳತೆಗಳು 3:4:5 ಅನುಪಾತದಲ್ಲಿವೆ. ಪೆಟ್ಟಿಗೆಯ ಎಲ್ಲಾ ಹೊರ ಮೇಲ್ಮೈಗಳಿಗೆ ₹4/$cm^2$ ದರದಲ್ಲಿ ಬಣ್ಣ ಬಳಿಯಬೇಕಿದೆ. ಬಣ್ಣ ಬಳಿಯಲು ತಗಲುವ ವೆಚ್ಚದ ಮೇಲೆ 18% GST ಅನ್ವಯಿಸಿದರೆ, ಪಾವತಿಸಬೇಕಾದ ಒಟ್ಟು ಮೊತ್ತ ಎಷ್ಟು?

**Ans**

- ✗ A. ₹11,540
- ✗ B. ₹10,250
- ✗ C. ₹12,100
- ✓ D. ₹11,092

**Q.62** 1 ರಿಂದ 100 ರಿಂದ ಒಂದು ಸಂಖ್ಯೆಯನ್ನು ಯಾದೃಚ್ಛಿಕವಾಗಿ ಆಯ್ಕೆ ಮಾಡಲಾಗುತ್ತದೆ. ಆ ಸಂಖ್ಯೆಯು 2 ರಿಂದ ಅಥವಾ 5 ರಿಂದ ನಿಶ್ಶೇಷವಾಗಿ ಭಾಗಿಸಲ್ಪಡದಿರುವ ಸಂಭವನೀಯತೆ ಎಷ್ಟು?

**Ans**

- ✗ A. $\frac{3}{4}$
- ✗ B. $\frac{3}{5}$
- ✗ C. $\frac{1}{3}$
- ✓ D. $\frac{2}{5}$

**Q.63** ಒಂದು ಉತ್ಪನ್ನವನ್ನು A ಮತ್ತು B ಎಂಬ ಎರಡು ಭಾಗಗಳನ್ನು ಸೇರಿಸಿ ಮಾಡಲಾಗುತ್ತದೆ. A ಭಾಗಗಳು ಒಟ್ಟು 105 ಸಂಖ್ಯೆಯಲ್ಲಿ ಇವೆ. ಅದರಲ್ಲಿ 15 ಹಾಳಾಗಿವೆ. ಒಟ್ಟು B ಭಾಗಗಳ ಸಂಖ್ಯೆ 104 ಇದೆ. ಅದರಲ್ಲಿ 8 ಹಾಳಾಗಿವೆ. ಹಾಗಾದರೆ, ಒಂದು 'A' ಮತ್ತು ಒಂದು 'B' ಭಾಗವನ್ನು ಸೇರಿಸಿ ಮಾಡಬೇಕಾಗಿರುವ ಉತ್ಪನ್ನದಲ್ಲಿ, ಯಾವುದೇ ದೋಷಪೂರಿತ ಭಾಗಗಳು ಇಲ್ಲದಿರುವ ಸಂಭವನೀಯತೆ ಎಷ್ಟು?

**Ans**

- ✗ A. $\frac{78}{91}$
- ✓ B. $\frac{72}{91}$
- ✗ C. $\frac{84}{91}$
- ✗ D. $\frac{65}{91}$

**Q.64** ಒಂದು ಶಾಲೆಯಲ್ಲಿ, 68 ಶಿಕ್ಷಕರು ಗಣಿತ ಅಥವಾ ಭೌತಶಾಸ್ತ್ರವನ್ನು ಕಲಿಸುತ್ತಾರೆ. ಇವರಲ್ಲಿ 55 ಶಿಕ್ಷಕರು ಗಣಿತವನ್ನು ಕಲಿಸಿದರೆ, 45 ಶಿಕ್ಷಕರು ಭೌತಶಾಸ್ತ್ರ ಮತ್ತು ಗಣಿತ ಎರಡನ್ನೂ ಕಲಿಸುತ್ತಾರೆ. ಹಾಗಾದರೆ ಎಷ್ಟು ಶಿಕ್ಷಕರು ಭೌತಶಾಸ್ತ್ರವನ್ನು ಕಲಿಸುತ್ತಾರೆ?

**Ans**

- ✓ A. 58
- ✗ B. 57
- ✗ C. 64
- ✗ D. 50

**Q.65** A(2,3), B(4,7) ಮತ್ತು C(6,11) ಗಳು ಒಂದು ಸಮತಲದ ಮೇಲಿನ ಮೂರು ಬಿಂದುಗಳಾಗಿವೆ. ಸರಿಯಾದ ಹೇಳಿಕೆಯನ್ನು ಆರಿಸಿ.

**Ans**

- ✗ A. A, B ಮತ್ತು C ಗಳು ತ್ರಿಭುಜದ ಶೃಂಗಗಳಾಗಿವೆ
- ✗ B. AB ಯು BC ಗೆ ಲಂಬವಾಗಿದೆ
- ✓ C. A, B ಮತ್ತು C ಗಳು ಏಕರೇಖೀಯ ಆಗಿವೆ
- ✗ D. AB=CA

Section : **Basic Science and Engineering**

Blackbook

Get India's No 1 Vocab Preparation App for FREE : **Blackbook : English Vocabulary**

GET IT ON Google Play

**Q.66** ಪ್ರತಿಯೊಂದು ವಾಹಕ ಡಯೋಡ್‌ನ ಫಾರ್ವರ್ಡ್ ವೋಲ್ಟೇಜ್ ಡ್ರಾಪ್ $V_f$ ಆಗಿದ್ದರೆ, ಟ್ರಾನ್ಸ್‌ಫಾರ್ಮರ್ ಸೆಕೆಂಡರಿ $V_{p(in)}$ ನ ಇನ್‌ಪುಟ್ ಪೀಕ್ ವೋಲ್ಟೇಜ್‌ನ ಪರಿಭಾಷೆಯಲ್ಲಿ ಪೂರ್ಣ-ತರಂಗ ಬ್ರಿಡ್ಜ್ ದಿಷ್ಟಕಾರಿಯ (ರೆಕ್ಟಿಫೈಯರ್) ಪೀಕ್ ಔಟ್‌ಪುಟ್ ವೋಲ್ಟೇಜ್ ಅನ್ನು ಈ ಕೆಳಗಿನ ಯಾವ ಗಣಿತೋಕ್ತಿಯು ನೀಡುತ್ತದೆ?

Ans
- ✗ A. $V_{p(out)} = 2\,V_{p(in)} - 2\,V_f$
- ✓ B. $V_{p(out)} = V_{p(in)} - 2V_f$
- ✗ C. $V_{p(out)} = V_{p(in)} - V_f$
- ✗ D. $V_{p(out)} = V_{p(in)} + 2\,V_f$

**Q.67** ದಶಮಾಂಶ ಸಂಖ್ಯೆ 45 ರ ದ್ವಿಮಾನ (ಬೈನರಿ) ಸಮಾನ ಮೌಲ್ಯ ಎಷ್ಟು?

Ans
- ✗ A. 100111
- ✗ B. 110101
- ✗ C. 101011
- ✓ D. 101101

**Q.68** 5 C ವಿದ್ಯುದಾವೇಶವನ್ನು 12 V ವಿಭವಾಂತರದ ಮೂಲಕ ಚಲಿಸಲಾಗುತ್ತದೆ. ವಿದ್ಯುತ್ ಕ್ಷೇತ್ರದಿಂದ ನಡೆದ ಕೆಲಸ ಎಷ್ಟು?

Ans
- ✗ A. 17 J
- ✓ B. 60 J
- ✗ C. 50 J
- ✗ D. 120 J

**Q.69** ವಿನ್ಯಾಸಕರೊಬ್ಬರು 8051-ಆಧಾರಿತ ಎಂಬೆಡೆಡ್ ಸಿಸ್ಟಮ್ ಅನ್ನು ಅಭಿವೃದ್ಧಿಪಡಿಸುತ್ತಿದ್ದಾರೆ. ಇದಕ್ಕೆ ಪ್ರೋಗ್ರಾಂ ಕೋಡ್ ಅನ್ನು ಬದಲಾಯಿಸದೆ, ಆಂತರಿಕ RAM ಸಾಮರ್ಥ್ಯವನ್ನು ಮೀರಿದ, ದೊಡ್ಡ ಪ್ರಮಾಣದ ಆಗಾಗ್ಗೆ ಬದಲಾಗುವ ಡೇಟಾವನ್ನು ಸಂಗ್ರಹಿಸುವ ಅಗತ್ಯವಿರುತ್ತದೆ. ಹಾಗಾದರೆ ಯಾವುದು ಹೆಚ್ಚು ಸೂಕ್ತವಾದ ಮೆಮೊರಿ ಕಾನ್ಫಿಗರೇಶನ್ ಆಗಿದೆ?

Ans
- ✗ A. ಬಾಹ್ಯ RAM ನಲ್ಲಿ ಕೋಡ್, ಆಂತರಿಕ RAM ನಲ್ಲಿ ಡೇಟಾ ಇದೆ
- ✓ B. ROM ನಲ್ಲಿ ಕೋಡ್, ಬಾಹ್ಯ RAM ನಲ್ಲಿ ಡೇಟಾ ಇದೆ
- ✗ C. ಆಂತರಿಕ RAM ನಲ್ಲಿ ಕೋಡ್, ROM ನಲ್ಲಿ ಡೇಟಾ ಇದೆ
- ✗ D. ROM ನಲ್ಲಿ ಕೋಡ್ ಮತ್ತು ಡೇಟಾ ಎರಡೂ ಇವೆ

**Q.70** ಒಂದು ತಂತಿಯನ್ನು ಅದರ ವಸ್ತುವನ್ನು ಬದಲಾಯಿಸದೆ ಸ್ಥಿರ ತಾಪಮಾನದಲ್ಲಿ ಏಕರೂಪವಾಗಿ ಹಿಗ್ಗಿಸಲಾಗುತ್ತದೆ. ಈ ಕೆಳಗಿನವುಗಳಲ್ಲಿ ಯಾವ ಭೌತಿಕ ಪರಿಮಾಣವು ಬದಲಾಗದೆ ಉಳಿಯುತ್ತದೆ?

Ans
- ✗ A. ರೋಧ
- ✗ B. ಅಡ್ಡ-ಛೇದನ ವಿಸ್ತೀರ್ಣ
- ✗ C. ಉದ್ದ
- ✓ D. ರೋಧಶೀಲತೆ

**Q.71** ಸಮಾನಾಂತರ ರೋಧಕ ಮಂಡಲದ ಒಂದು ಶಾಖೆಯನ್ನು ಸಂಪರ್ಕ ಕಡಿತಗೊಳಿಸಿದರೆ ನೀವು ಯಾವ ಪರಿಣಾಮವನ್ನು ನಿರೀಕ್ಷಿಸಬಹುದು?

Ans
- ✗ A. ಇತರ ಶಾಖೆಗಳು ಮೂಲಕ ಹರಿಯುವ ಪ್ರವಾಹವು ಹೆಚ್ಚಾಗುತ್ತದೆ
- ✗ B. ಇತರ ಶಾಖೆಗಳ ಮೂಲಕ ಹರಿಯುವ ಪ್ರವಾಹವು ಕಡಿಮೆಯಾಗುತ್ತದೆ
- ✗ C. ಇತರ ಶಾಖೆಗಳ ಮೂಲಕ ಹರಿಯುವ ಪ್ರವಾಹವು ಶೂನ್ಯವಾಗುತ್ತದೆ
- ✓ D. ಇತರ ಶಾಖೆಗಳ ಮೂಲಕ ಹರಿಯುವ ಪ್ರವಾಹವು ಬದಲಾಗದೆ ಉಳಿಯುತ್ತದೆ

**Q.72** 8051 ಮೈಕ್ರೋಕಂಟ್ರೋಲರ್‌ನಲ್ಲಿರುವ ಯಾವ ಅಡ್ರೆಸ್ಸಿಂಗ್ ಮೋಡ್ (ವಿಳಾಸ ಕ್ರಮವು) ರಿಜಿಸ್ಟರ್‌ನಲ್ಲಿ ಸಂಗ್ರಹವಾಗಿರುವ ಅಡ್ರೆಸ್ ಮೂಲಕ ಡೇಟಾವನ್ನು ಪ್ರವೇಶಿಸಲು ಅನುಮತಿಸುತ್ತದೆ (ಉದಾಹರಣೆಗೆ R0, R1, ಅಥವಾ DPTR)?

Ans
- ✓ A. ರಿಜಿಸ್ಟರ್ ಇನ್ಡೈರೆಕ್ಟ್ ಅಡ್ರೆಸಿಂಗ್
- ✗ B. ಡೈರೆಕ್ಟ್ ಅಡ್ರೆಸಿಂಗ್
- ✗ C. ಇಂಡೆಕ್ಸ್ಡ್ ಅಡ್ರೆಸಿಂಗ್
- ✗ D. ಇಮ್ಮಿಡಿಯೇಟ್ ಅಡ್ರೆಸಿಂಗ್

Blackbook

Get India's No 1 Vocab Preparation App for FREE : Blackbook : English Vocabulary

GET IT ON Google Play

**Q.73** **ಋಣಾತ್ಮಕ ಆವೇಶವನ್ನು + 5 V ಬಿಂದುವಿನಿಂದ + 15 V ಬಿಂದುವಿಗೆ ಸ್ಥಳಾಂತರಿಸಲಾಗುತ್ತದೆ. ಹಾಗಾದರೆ ಅದರ ವಿದ್ಯುತ್ ವಿಭವ ಶಕ್ತಿಯಲ್ಲಿ ಏನು ಬದಲಾವಣೆ ಆಗುತ್ತದೆ?**

**Ans**

✗ A. ಅದು ಹೆಚ್ಚಾಗುತ್ತದೆ

✗ B.
ಅದು ಶೂನ್ಯವಾಗುತ್ತದೆ

✗ C. ಅದು ಬದಲಾಗದೆ ಉಳಿಯುತ್ತದೆ

✓ D. ಅದು ಕಡಿಮೆಯಾಗುತ್ತದೆ

**Q.74** **ವಾಹಕವು 20 ಸೆಕೆಂಡುಗಳ ಕಾಲ 3 A ವಿದ್ಯುತ್ ಪ್ರವಾಹವನ್ನು ಸಾಗಿಸಿದರೆ, ವಾಹಕದ ಅಡ್ಡ-ಛೇದದ ಮೂಲಕ ಎಷ್ಟು ವಿದ್ಯುದಾವೇಶವು ಹಾದುಹೋಗುತ್ತದೆ?**

**Ans**

✗ A. 17 ಕೂಲಮ್‌ಗಳು (coulombs)

✓ B. 60 ಕೂಲಮ್‌ಗಳು (coulombs)

✗ C. 6 ಕೂಲಮ್‌ಗಳು (coulombs)

✗ D. 23 ಕೂಲಮ್‌ಗಳು (coulombs)

**Q.75** **ಘನ ಲೋಹದ ಬ್ಲಾಕ್ ಮತ್ತು ನಮ್ಯ (flexible) ಬಲೂನಿನಲ್ಲಿರುವ ಅನಿಲವು ಸಮಾನ ಬಾಹ್ಯ ಒತ್ತಡದ ಹೆಚ್ಚಳಕ್ಕೆ ಒಳಗಾಗುತ್ತವೆ. ಯಾವ ವಸ್ತುವಿನಲ್ಲಿ ಸಾಂದ್ರತೆಯು ಬೇಗ ಹೆಚ್ಚಾಗುತ್ತದೆ?**

**Ans**

✗ A. ಎರಡರಲ್ಲೂ ಸಾಂದ್ರತೆಯು ಒಂದೇ ರೀತಿಯಲ್ಲಿ ಹೆಚ್ಚಾಗುತ್ತದೆ

✓ B. ಬಲೂನು ಒಳಗೆ ಇರುವ ಅನಿಲ

✗ C. ಘನ ಲೋಹದ ಬ್ಲಾಕ್

✗ D. ಇವುಗಳಲ್ಲಿ ಯಾವುದರ ಸಾಂದ್ರತೆಯೂ ಬದಲಾಗುವುದಿಲ್ಲ

**Q.76** **ಒಂದು ರೆಕ್ಟಿಫೈಯರ್ ಸರ್ಕ್ಯೂಟ್‌ಗೆ, ಇತರ ಎಲ್ಲಾ ಕಾರ್ಯನಿರ್ವಹಣಾ ಪರಿಸ್ಥಿತಿಗಳು ಬದಲಾಗದೆ ಉಳಿದಿರುವಾಗ ಫಾರ್ಮ್ ಫ್ಯಾಕ್ಟರ್ ( $K_f$ ) ಅನ್ನು ಕಡಿಮೆ ಮಾಡಲಾಗುತ್ತದೆ. ಹಾಗಾದರೆ ರಿಪಲ್ ಫ್ಯಾಕ್ಟರ್ ಮೇಲಿನ ಪರಿಣಾಮವೇನು?**

**Ans**

✗ A. ಅದು ಮೊದಲು ಕಡಿಮೆಯಾಗುತ್ತದೆ ಮತ್ತು ನಂತರ ಹೆಚ್ಚಾಗುತ್ತದೆ.

✓ B. ರಿಪಲ್ ಫ್ಯಾಕ್ಟರ್ ನೇರವಾಗಿ ಫಾರ್ಮ್ ಫ್ಯಾಕ್ಟರ್ ಅನ್ನು ಅವಲಂಬಿಸಿರುವುದರಿಂದ ಅದು ಕಡಿಮೆಯಾಗುತ್ತದೆ.

✗ C. ರಿಪಲ್ ಫ್ಯಾಕ್ಟರ್, ಫಾರ್ಮ್ ಫ್ಯಾಕ್ಟರ್ ಅನ್ನು ಅವಲಂಬಿಸದ ಕಾರಣ ಅದು ಬದಲಾಗದೆ ಉಳಿಯುತ್ತದೆ.

✗ D. DC ಘಟಕವು ಕಡಿಮೆಯಾದ ಕಾರಣ ಅದು ಹೆಚ್ಚಾಗುತ್ತದೆ.

**Q.77** **ರೋಧಕತೆ (resistivity)ಯ SI ಏಕಮಾನ ಇದಾಗಿದೆ:**

**Ans**

✓ A. Ω m

✗ B. Ω

✗ C. S/m

✗ D. Ω/m

**Q.78** **ಒಂದು ವಿದ್ಯುತ್ ಮಂಡಲದಲ್ಲಿ 2 ohms, 4 ohms ಮತ್ತು 8 ohms ರೋಧಕಗಳನ್ನು ಹೊಂದಿರುವ ಮೂರು ಶಾಖೆಗಳು ಸಮಾನಾಂತರವಾಗಿವೆ. 8 ohms ರೋಧಕದ ಮೂಲಕ ಹರಿಯುವ ವಿದ್ಯುತ್ ಪ್ರವಾಹಕ್ಕೆ ಹೋಲಿಸಿದರೆ, 2 ohms ರೋಧಕದ ಮೂಲಕ ಹರಿಯುವ ವಿದ್ಯುತ್ ಪ್ರವಾಹವನ್ನು ಯಾವ ಹೇಳಿಕೆಯು ಸರಿಯಾಗಿ ವಿವರಿಸುತ್ತದೆ?**

**Ans**

✗ A. 2 ohms ರೋಧಕದ ಮೂಲಕ ಹರಿಯುವ ವಿದ್ಯುತ್ ಪ್ರವಾಹವು 8 ohms ರೋಧಕದ ಮೂಲಕ ಹರಿಯುತ್ತಿರುವ ವಿದ್ಯುತ್ ಪ್ರವಾಹಕ್ಕಿಂತ ಕಡಿಮೆ ಇರುತ್ತದೆ

✗ B. 2 ohms ರೋಧಕದ ಮೂಲಕ ಹರಿಯುವ ವಿದ್ಯುತ್ ಪ್ರವಾಹವು 8 ohms ರೋಧಕದ ಮೂಲಕ ಹರಿಯುತ್ತಿರುವ ವಿದ್ಯುತ್ ಪ್ರವಾಹಕ್ಕೆ ಸಮನಾಗಿರುತ್ತದೆ

✓ C. 2 ohms ರೋಧಕದ ಮೂಲಕ ಹರಿಯುವ ವಿದ್ಯುತ್ ಪ್ರವಾಹವು 8 ohms ರೋಧಕದ ಮೂಲಕ ಹರಿಯುತ್ತಿರುವ ವಿದ್ಯುತ್ ಪ್ರವಾಹಕ್ಕಿಂತ ಹೆಚ್ಚಿರುತ್ತದೆ

✗ D. 2 ohms ರೋಧಕದ ಮೂಲಕ ಹರಿಯುವ ವಿದ್ಯುತ್ ಪ್ರವಾಹವು 8 ohms ರೋಧಕದ ಮೂಲಕ ಹರಿಯುತ್ತಿರುವ ವಿದ್ಯುತ್ ಪ್ರವಾಹಕ್ಕೆ ಹೋಲಿಸಿದರೆ ಶೂನ್ಯವಾಗಿರುತ್ತದೆ

**Q.79** **LED ಯು ಬೆಳಕನ್ನು ಹೊರಸೂಸಲು ಯಾವ ಎಲೆಕ್ಟ್ರಿಕಲ್ ಬಯಾಸ್ ಅಗತ್ಯವಿದೆ?**

**Ans**

✗ A. ರಿವರ್ಸ್ ಬಯಾಸ್

✗ B. ಝೀರೋ ಬಯಾಸ್

✗ C. ಓಪನ್ ಸರ್ಕ್ಯೂಟ್ ಸ್ಥಿತಿ

✓ D. ಫಾರ್ವರ್ಡ್ ಬಯಾಸ್

Blackbook

Get India's No 1 Vocab Preparation App for FREE : Blackbook : English Vocabulary
GET IT ON Google Play

**Q.80** ಸರಳ ಸರ್ಕ್ಯೂಟ್ ನಲ್ಲಿ ಬ್ಯಾಟರಿಗೆ ವೋಲ್ಟ್‌ಮೀಟರ್ ಅನ್ನು ಸಂಪರ್ಕಿಸಲಾಗಿದೆ. ಅದು ಏನನ್ನು ಅಳೆಯುತ್ತದೆ?

**Ans**

✔ A. ಇದು ಬ್ಯಾಟರಿ ತುದಿಗಳ ನಡುವಿನ ವಿಭವ ವ್ಯತ್ಯಾಸವನ್ನು ಅಳೆಯುತ್ತದೆ.

✘ B. ಅದು ಬ್ಯಾಟರಿಯ ಮೂಲಕ ಹರಿಯುವ ವಿದ್ಯುತ್ ಪ್ರವಾಹವನ್ನು ಅಳೆಯುತ್ತದೆ.

✘ C. ಅದು ಸರ್ಕ್ಯೂಟ್ ಬಳಸುವ ಒಟ್ಟು ಸಾಮರ್ಥ್ಯವನ್ನು ಅಳೆಯುತ್ತದೆ.

✘ D. ಅದು ಇಡೀ ಸರ್ಕ್ಯೂಟ್ ನ ರೋಧವನ್ನು ಅಳೆಯುತ್ತದೆ.

**Q.81** ದಶಮಾಂಶ ಸಂಖ್ಯೆಯಾದ 12 ಕ್ಕೆ ಸಮಾನವಾದ ಷೋಡಶದಶಮಾನ (hexadecimal) ಅಂಕಿ ಯಾವುದು?

**Ans**

✔ A. C

✘ B. D

✘ C. A

✘ D. B

**Q.82** ಆದರ್ಶ ವೋಲ್ಟ್‌ಮೀಟರ್ ಅನ್ನು ಒಂದು ಸರಳ ಸರಣಿ ಸರ್ಕ್ಯೂಟ್‌ನಲ್ಲಿ ರೋಧಕಕ್ಕೆ ಸಮಾನಾಂತರವಾಗಿ ಸಂಪರ್ಕಿಸಿದಾಗ, ಸರ್ಕ್ಯೂಟ್‌ನ ಒಟ್ಟು ವಿದ್ಯುತ್ ಪ್ರವಾಹದ ಮೇಲೆ ಅದು ಯಾವ ಪರಿಣಾಮ ಬೀರುತ್ತದೆ?

**Ans**

✘ A. ವೋಲ್ಟ್‌ಮೀಟರ್ ರೋಧವನ್ನು ಸೇರಿಸುವುದರಿಂದ ಒಟ್ಟು ವಿದ್ಯುತ್ ಪ್ರವಾಹವು ಕಡಿಮೆಯಾಗುತ್ತದೆ

✔ B. ವೋಲ್ಟ್‌ಮೀಟರ್ ಯಾವುದೇ ವಿದ್ಯುತ್ ಪ್ರವಾಹವನ್ನು ಸೆಳೆಯದ ಕಾರಣದಿಂದಾಗಿ ಒಟ್ಟು ವಿದ್ಯುತ್ ಪ್ರವಾಹವು ಬದಲಾಗದೆ ಉಳಿಯುತ್ತದೆ

✘ C. ವೋಲ್ಟ್‌ಮೀಟರ್ ವಿದ್ಯುತ್ ಪ್ರವಾಹವನ್ನು ನಿರ್ಬಂಧಿಸುವುದರಿಂದ ಒಟ್ಟು ವಿದ್ಯುತ್ ಪ್ರವಾಹವು ಶೂನ್ಯಕ್ಕೆ ಕುಸಿಯುತ್ತದೆ

✘ D. ವೋಲ್ಟ್‌ಮೀಟರ್ ಹೊಸ ಪಥವನ್ನು ಒದಗಿಸುವುದರಿಂದ ಒಟ್ಟು ವಿದ್ಯುತ್ ಪ್ರವಾಹವು ಹೆಚ್ಚಾಗುತ್ತದೆ

**Q.83** ಒಂದು ಹೊಸ ಮಿಶ್ರಲೋಹದಿಂದ ಮಾಡಿದ ಸಿಲಿಂಡರಾಕಾರದ ತಂತಿಯನ್ನು ಅದರ ಮೂಲ ಉದ್ದವನ್ನು ದ್ವಿಗುಣಗೊಳಿಸಲು ಹಿಗ್ಗಿಸಿದಾಗ, ಅದರ ರೋಧವು ನಾಲ್ಕು ಗುಣಕಗಳಿಂದ ಹೆಚ್ಚಾಗುತ್ತದೆ. ಅದೇ ಮಿಶ್ರಲೋಹದ ಎರಡನೇ ತಂತಿಯನ್ನು ಒಂದೇ ಉದ್ದದ ಆದರೆ ಮೂಲ ಅಡ್ಡ-ಛೇದನ ವಿಸ್ತೀರ್ಣದ ಅರ್ಧಕ್ಕೆ ಸಮನಾದ ಸಮತಟ್ಟಾದ ರಿಬ್ಬನ್ ಆಗಿ ರೂಪಿಸಿದರೆ, ಎರಡು ತಂತಿಗಳ ನಡುವೆ ಯಾವ ಗುಣಲಕ್ಷಣವು ಸ್ಥಿರವಾಗಿರುತ್ತದೆ?

**Ans**

✔ A. ವಿಶಿಷ್ಟ ರೋಧವು ಎರಡೂ ತಂತಿಗಳಿಗೆ ಬದಲಾಗದೆ ಉಳಿಯುತ್ತದೆ

✘ B. ಆಕಾರ ಬದಲಾವಣೆಯನ್ನು ಲೆಕ್ಕಿಸದೆ ರೋಧವು ಸ್ಥಿರವಾಗಿರುತ್ತದೆ

✘ C. ನೀಡಲಾದ ವಿದ್ಯುತ್ ಪ್ರವಾಹದ ವೋಲ್ಟೇಜ್ ಕುಸಿತವು ಎರಡೂ ತಂತಿಗಳಲ್ಲಿ ಸಮಾನ ಆಗಿರುತ್ತದೆ

✘ D. ವಿದ್ಯುತ್ ಸಾಗಿಸುವ ಸಾಮರ್ಥ್ಯವು ಎರಡೂ ತಂತಿಗಳಿಗೆ ಒಂದೇ ರೀತಿ ಇರುತ್ತದೆ

**Q.84** ಒಂದು ಆಂಪೇರಿಯನ್ ಲೂಪ್ (ಕುಣಿಕೆಯು) 4 A, 3 A, ಮತ್ತು 1 A ಗಳ ವಿದ್ಯುತ್ ಪ್ರವಾಹಗಳನ್ನು ಸಾಗಿಸುವ ಮೂರು ವಾಹಕಗಳನ್ನು ಆವರಿಸಿದೆ. ಎರಡು ಪ್ರವಾಹಗಳನ್ನು ಪುಟದ ಒಳಕ್ಕೆ ನಿರ್ದೇಶಿಸಲಾಗಿದೆ ಮತ್ತು ಒಂದು ಪ್ರವಾಹವನ್ನು ಪುಟದಿಂದ ಹೊರಕ್ಕೆ ನಿರ್ದೇಶಿಸಲಾಗಿದೆ. ಹಾಗಾದರೆ ಆವೃತವಾಗಿರುವ ವಿದ್ಯುತ್ ಪ್ರವಾಹವನ್ನು ನಿರ್ಧರಿಸಲು ಯಾವ ಹೆಚ್ಚುವರಿ ಮಾಹಿತಿಯ ಅಗತ್ಯವಿದೆ?

**Ans**

✘ A. ವಾಹಕಗಳ ವಸ್ತು

✘ B. ಲೂಪ್ (ಕುಣಿಕೆಯ) ತ್ರಿಜ್ಯ

✔ C. ಪ್ರತಿಯೊಂದು ವಿದ್ಯುತ್ ಪ್ರವಾಹದ ದಿಕ್ಕು

✘ D. ವಾಹಕಗಳ ರೋಧ

**Q.85** ಸಮಾನ ಮೌಲ್ಯದ ಮೂರು ರೋಧಕಗಳನ್ನು ಸ್ಥಿರ ವೋಲ್ಟೇಜ್ ಆಕರದಲ್ಲಿ ಸಮಾನಾಂತರವಾಗಿ ಸಂಪರ್ಕಿಸಿದರೆ, ಈ ಕೆಳಗಿನ ಯಾವ ಹೇಳಿಕೆ ಸರಿಯಾಗಿದೆ?

**Ans**

✔ A. ಪ್ರತಿಯೊಂದು ರೋಧಕವು ಸಮಾನ ಪ್ರಮಾಣದ ವಿದ್ಯುತ್ ಪ್ರವಾಹವನ್ನು ಸಾಗಿಸುತ್ತದೆ

✘ B. ಆಕರಕ್ಕೆ ಹತ್ತಿರವಿರುವ ರೋಧಕವು ಅತಿ ಹೆಚ್ಚಿನ ವಿದ್ಯುತ್ ಪ್ರವಾಹವನ್ನು ಸಾಗಿಸುತ್ತದೆ

✘ C.
ವಿದ್ಯುತ್ ಪ್ರವಾಹವು ರೋಧಕದ ಸ್ಥಾನವನ್ನು ಅವಲಂಬಿಸಿರುತ್ತದೆ

✘ D. ಒಟ್ಟು ವಿದ್ಯುತ್ ಪ್ರವಾಹವು ಒಂದು ರೋಧಕದಷ್ಟೇ ಇರುತ್ತದೆ

Get India's No 1 Vocab Preparation App for FREE : Blackbook : English Vocabulary
GET IT ON Google Play

**Q.86** ಏಕರೂಪದ ವಸ್ತುವನ್ನು ಅದರ ದ್ರವ್ಯರಾಶಿಯು ಅದರ ಮೂಲ ಮೌಲ್ಯದ ಮೂರು ಪಟ್ಟು ಆಗುವಂತೆ ಮತ್ತು ಅದರ ಗಾತ್ರವು ಅದರ ಮೂಲ ಮೌಲ್ಯದ ಎರಡು ಪಟ್ಟು ಆಗುವಂತೆ ಬದಲಾಯಿಸಲಾಗುತ್ತದೆ. ಹಾಗಾದರೆ ಮೂಲ ಸಾಂದ್ರತೆಗೆ ಹೋಲಿಸಿದರೆ ಹೊಸ ಸಾಂದ್ರತೆ ಎಷ್ಟು?

**Ans**
- ✗ A. ಮೂಲ ಸಾಂದ್ರತೆಯ ಮೂರು ಪಟ್ಟು
- ✗ B. ಮೂಲ ಸಾಂದ್ರತೆಯ ಎರಡು ಪಟ್ಟು
- ✗ C. ಮೂಲ ಸಾಂದ್ರತೆಯ 2/3 ಪಟ್ಟು
- ✓ D. ಮೂಲ ಸಾಂದ್ರತೆಯ 3/2 ಪಟ್ಟು

**Q.87** ಪಾತ್ರೆಯು ನಿರ್ದಿಷ್ಟ ದ್ರವ್ಯರಾಶಿಯ ಅನಿಲವನ್ನು ಹೊಂದಿದೆ. ಅನಿಲವನ್ನು ಅದರ ಪ್ರಮಾಣವು 5 : 2 ರ ಅನುಪಾತದಲ್ಲಿ ಕಡಿಮೆಯಾಗುವವರೆಗೆ ಅದನ್ನು ಸಂಕುಚಿತಗೊಳಿಸಲಾಗುತ್ತದೆ. ಅದರ ಆರಂಭಿಕ ಮೌಲ್ಯಕ್ಕೆ ಹೋಲಿಸಿದರೆ, ಈಗ ಅನಿಲದ ಸಾಂದ್ರತೆಯು _____ ಆಗಿರುತ್ತದೆ.

**Ans**
- ✗ A. 5ρ
- ✗ B. 2ρ
- ✗ C. 0.4ρ
- ✓ D. 2.5ρ

**Q.88** JFET ಯು ಓಮಿಕ್ ಪ್ರದೇಶ (ohmic region) ದಲ್ಲಿ ಕಾರ್ಯನಿರ್ವಹಿಸುವಾಗ ಅದರ ವರ್ತನೆಯು, ಪರ್ಯಾಪ್ತ ಪ್ರದೇಶ (saturation region) ದಲ್ಲಿ ಕಾರ್ಯನಿರ್ವಹಿಸುವಾಗಿನ ಅದರ ವರ್ತನೆಗೆ ಹೋಲಿಸಿದಾಗ ಹೇಗಿರುತ್ತದೆ?

**Ans**
- ✗ A. ಇದು ಓಮಿಕ್ ಪ್ರದೇಶದಲ್ಲಿ ಸಂಪೂರ್ಣವಾಗಿ ನಿಷ್ಕ್ರಿಯವಾಗಿರುತ್ತದೆ
- ✗ B. ಇದು ಓಮಿಕ್ ಪ್ರದೇಶದಲ್ಲಿ ಸಂಕೇತಗಳನ್ನು ವರ್ಧಿಸುತ್ತದೆ
- ✓ C. ಇದು ಓಮಿಕ್ ಪ್ರದೇಶದಲ್ಲಿ ವೋಲ್ಟೇಜ್ ನಿಯಂತ್ರಿತ ರೋಧಕವಾಗಿ ಕಾರ್ಯನಿರ್ವಹಿಸುತ್ತದೆ
- ✗ D. ಇದು ಸ್ಥಿರ-ಪ್ರವಾಹದ ಮೂಲವಾಗಿ ವರ್ತಿಸುತ್ತದೆ

**Q.89** ಒಂದು ವಿದ್ಯುದಾವೇಶವು 30 V ನಿಂದ 10 V ಗೆ ಚಲಿಸಿ, 40 J ವಿದ್ಯುತ್ ವಿಭವ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ಹಾಗಾದರೆ ಆ ವಿದ್ಯುದಾವೇಶದ ಪರಿಮಾಣ ಎಷ್ಟು?

**Ans**
- ✗ A. 4 C
- ✗ B. 1 C
- ✗ C. 3 C
- ✓ D. 2 C

**Q.90** ಸೂಪರ್‌ಇಂಪೋಸ್ಡ್ AC ಗದ್ದಲದೊಂದಿಗೆ DC ಸಿಗ್ನಲ್ ಅನ್ನು ಅಳೆಯಲು ಡಿಜಿಟಲ್ ವೋಲ್ಟ್‌ಮೀಟರ್ ಅಗತ್ಯವಿದೆ. ಯಾವ ವಿಧದ DVM ಹೆಚ್ಚು ನಿಖರವಾದ ಮಾಪನಾಂಕವನ್ನು ಉಂಟುಮಾಡುತ್ತದೆ?

**Ans**
- ✓ A. ಇಂಟಿಗ್ರೇಟಿಂಗ್ ಟೈಪ್ DVM, ಏಕೆಂದರೆ ಇದು ಪರಿವರ್ತನೆ ಅವಧಿಯಲ್ಲಿ ಇನ್‌ಪುಟ್ ಅನ್ನು ಸರಾಸರಿ ಮಾಡುತ್ತದೆ
- ✗ B. ರ್‍ಯಾಂಪ್ ಟೈಪ್ DVM, ಏಕೆಂದರೆ ಅದರ ಪರಿವರ್ತನೆ ಸಮಯವು ಇನ್‌ಪುಟ್ ವೋಲ್ಟೇಜ್‌ನೊಂದಿಗೆ ಬದಲಾಗುತ್ತದೆ
- ✗ C. ವೋಲ್ಟೇಜ್-ನಿಂದ-ಆವರ್ತನ ಪರಿವರ್ತನೆ (Voltage-to-frequency conversion) DVM , ಏಕೆಂದರೆ ಹೆಚ್ಚಿನ ನಿಖರತೆಗಾಗಿ ಇದಕ್ಕೆ ದೀರ್ಘ ಎಣಿಕೆಯ ಮಧ್ಯಂತರಗಳ ಅಗತ್ಯವಿರುತ್ತದೆ.
- ✗ D. ಅನುಕ್ರಮಿಕ ಅಂದಾಜು DVM, ಏಕೆಂದರೆ ಇದು ಸ್ಥಿರ ಮತ್ತು ತುಲನಾತ್ಮಕವಾಗಿ ಕಡಿಮೆ ಸಮಯದಲ್ಲಿ ಪರಿವರ್ತನೆಯನ್ನು ಪೂರ್ಣಗೊಳಿಸುತ್ತದೆ

**Q.91** ಈ ಕೆಳಗಿನವುಗಳಲ್ಲಿ ಯಾವುದು ಉತ್ತಮ ವಾಹಕದ ಲಕ್ಷಣ ಅಲ್ಲ?

**Ans**
- ✗ A. ಕಡಿಮೆ ವಿದ್ಯುತ್ ರೋಧ
- ✗ B. ಲೋಹೀಯ ಬಂಧದ ರಚನೆ
- ✗ C. ಅನೇಕ ಮುಕ್ತ ಎಲೆಕ್ಟ್ರಾನ್‌ಗಳು ಲಭ್ಯತೆ
- ✓ D. ಹೆಚ್ಚಿನ ವಿದ್ಯುತ್ ರೋಧ

**Q.92** ಭೂಮಿಗೆ ಹೋಲಿಸಿದರೆ ಗುರುತ್ವಾಕರ್ಷಣೆಯಿಂದಾಗುವ ವೇಗೋತ್ಕರ್ಷವು 30% ದಷ್ಟು ಕಡಿಮೆ ಇರುವ ಗ್ರಹಕ್ಕೆ ವಸ್ತುವನ್ನು ಸ್ಥಳಾಂತರಿಸಲಾಗುತ್ತದೆ. ಅದರ ದ್ರವ್ಯರಾಶಿ ಬದಲಾಗದೆ ಉಳಿದಿದೆ ಎಂದು ಊಹಿಸಿದರೆ, ಈ ಕೆಳಗಿನ ಯಾವ ಹೇಳಿಕೆ ಸರಿಯಾಗಿದೆ?

**Ans**
- ✗ A. ಅದರ ದ್ರವ್ಯರಾಶಿ ಮತ್ತು ತೂಕ ಎರಡೂ 30% ದಷ್ಟು ಕಡಿಮೆಯಾಗುತ್ತವೆ
- ✗ B. ಆ ವಸ್ತುವಿನ ತೂಕವು ಭೂಮಿಯಲ್ಲಿನ ಅದರ ತೂಕದ 10/7 ಪಟ್ಟು ಆಗುತ್ತದೆ
- ✗ C. ಆ ವಸ್ತುವಿನ ದ್ರವ್ಯರಾಶಿಯು 30% ದಷ್ಟು ಕಡಿಮೆಯಾಗುತ್ತದೆ
- ✓ D. ಆ ವಸ್ತುವಿನ ತೂಕವು ಭೂಮಿಯ ಮೇಲಿನ ತನ್ನ ತೂಕದ 70% ಆಗುತ್ತದೆ

Blackbook

Get India's No 1 Vocab Preparation App for FREE : Blackbook : English Vocabulary
GET IT ON Google Play

**Q.93** ಸ್ಥಿರ ವೇಗದಲ್ಲಿ ಏಕರೂಪ ಕಾಂತ ಕ್ಷೇತ್ರದಲ್ಲಿ ವಿದ್ಯುತ್ ಆವೇಶಿತ ಕಣವೊಂದು ಚಲಿಸುತ್ತಿದೆ. ಒಂದು ಪೂರ್ಣ ವೃತ್ತಾಕಾರದ ಪರಿಭ್ರಮಣದ ನಂತರ ಕಾಂತೀಯ ಬಲದಿಂದ ಮಾಡಿದ ಕೆಲಸ ಎಷ್ಟು?

**Ans**

❌ A. ಧನಾತ್ಮಕ

❌ B. ಋಣಾತ್ಮಕ

❌ C. ಚಲನ ಶಕ್ತಿಗೆ ಸಮನಾಗಿರುತ್ತದೆ

✔ D. ಶೂನ್ಯ

**Q.94** ಪರಮಾಣುಗಳು ಮತ್ತು ಉಪಪರಮಾಣು ಕಣಗಳ ದ್ರವ್ಯರಾಶಿಯು ಅತ್ಯಂತ ಚಿಕ್ಕದಾಗಿರುವುದರಿಂದ, ವಿಜ್ಞಾನಿಗಳು ಕಿಲೋಗ್ರಾಂ ಬದಲಿಗೆ ಪರಮಾಣು ದ್ರವ್ಯರಾಶಿ ಏಕಮಾನವನ್ನು (u) ಬಳಸುತ್ತಾರೆ. SI ಏಕಮಾನದಲ್ಲಿ 1 u ನ ಅಂದಾಜು ಮೌಲ್ಯ ಎಷ್ಟು?

**Ans**

❌ A. $1.66\times10^{-30}$ kg

❌ B. $1.66\times10^{-24}$ kg

✔ C. $1.66\times10^{-27}$ kg

❌ D. $1.66\times10^{-21}$ kg

**Q.95** ಗುರುತ್ವಾಕರ್ಷಣೆಯ ಕಾರಣದಿಂದಾಗಿ ವೇಗೋತ್ಕರ್ಷವು $g_1$ ಆಗಿರುವ ಸ್ಥಳದಲ್ಲಿ ಒಂದು ವಸ್ತುವು $W_1$ ಎಂದು ತೂಗುತ್ತದೆ. ಮತ್ತೊಂದು ಸ್ಥಳದಲ್ಲಿ ಅದರ ತೂಕವು $5/3\ W_1$ ಆಗುತ್ತದೆ. ವಸ್ತುವಿನ ದ್ರವ್ಯರಾಶಿಯು ಸ್ಥಿರವಾಗಿರುವುದಾಗಿ ಭಾವಿಸಿದರೆ, $g_2$:$g_1$ ನ ಅನುಪಾತ ಎಷ್ಟು?

**Ans**

❌ A. 3 : 5

❌ B. 5 : 2

✔ C. 5 : 3

❌ D. 2 : 5

**Q.96** ಒಂದು ರೋಧಕವನ್ನು ಒಂದು ಆದರ್ಶ DC ವೋಲ್ಟೇಜ್ ಮೂಲಕ್ಕೆ ಸಂಪರ್ಕಿಸಲಾಗಿದೆ. ರೋಧಕವು ಸ್ಥಿರವಾದ ತಾಪಮಾನದಲ್ಲಿ ಇರುವಾಗ ಅನ್ವಯಿಸಿದ ವೋಲ್ಟೇಜ್ ಅನ್ನು ದ್ವಿಗುಣಗೊಳಿಸಲಾಗುತ್ತದೆ. ಹಾಗಾದರೆ ಈ ಕೆಳಗಿನವುಗಳಲ್ಲಿ ಯಾವ ಹೇಳಿಕೆಯು ಸರಿಯಾಗಿದೆ?

**Ans**

❌ A. ವಿದ್ಯುತ್ ಪ್ರವಾಹವು ದ್ವಿಗುಣಗೊಳ್ಳುತ್ತದೆ ಮತ್ತು ವಿದ್ಯುತ್ ಶಕ್ತಿಯು ದ್ವಿಗುಣಗೊಳ್ಳುತ್ತದೆ

✔ B. ವಿದ್ಯುತ್ ಪ್ರವಾಹವು ದ್ವಿಗುಣಗೊಳ್ಳುತ್ತದೆ ಮತ್ತು ವಿದ್ಯುತ್ ಶಕ್ತಿಯ ವ್ಯಯವು ಮೂಲ ಮೌಲ್ಯದ ನಾಲ್ಕು ಪಟ್ಟು ಆಗುತ್ತದೆ

❌ C. ವಿದ್ಯುತ್ ಪ್ರವಾಹವು ಬದಲಾಗದೆ ಉಳಿಯುತ್ತದೆ ಮತ್ತು ವಿದ್ಯುತ್ ಶಕ್ತಿಯು ದ್ವಿಗುಣಗೊಳ್ಳುತ್ತದೆ

❌ D. ವಿದ್ಯುತ್ ಪ್ರವಾಹವು ಮೂಲ ಮೌಲ್ಯದ ನಾಲ್ಕು ಪಟ್ಟು ಆಗುತ್ತದೆ ಮತ್ತು ವಿದ್ಯುತ್ ಶಕ್ತಿಯು ದ್ವಿಗುಣಗೊಳ್ಳುತ್ತದೆ

**Q.97** ದ್ರವ್ಯರಾಶಿಯ ಅಳತೆಗಳು ಸ್ಥಿರ ಮತ್ತು ಹೋಲಿಸಬಹುದಾದ ರೀತಿಯಲ್ಲಿರುವುದಕ್ಕಾಗಿ ಪ್ರಪಂಚದಾದ್ಯಂತದ ವಿಜ್ಞಾನಿಗಳು ಸಾಮಾನ್ಯ ಪ್ರಮಾಣಿತ ಏಕಮಾನವನ್ನು ಬಳಸುತ್ತಾರೆ. ಯಾವ SI ಏಕಮಾನವು ಈ ಉದ್ದೇಶವನ್ನು ಪೂರೈಸುತ್ತದೆ?

**Ans**

❌ A. ಗ್ರಾಂ

❌ B. ಟನ್

❌ C. ಪೌಂಡ್

✔ D. ಕಿಲೋಗ್ರಾಂ

**Q.98** ಒಂದು ತಾಮ್ರ ವಾಹಕದಲ್ಲಿ ಅದೇ ವೋಲ್ಟೇಜ್ ಅನ್ನು ಅನ್ವಯಿಸಿದರೆ, ಈ ಕೆಳಗಿನ ಯಾವ ಸನ್ನಿವೇಶವು ಗರಿಷ್ಠ ವಿದ್ಯುತ್ ಶಕ್ತಿ ಚದರುವಿಕೆಗೆ ಕಾರಣವಾಗುತ್ತದೆ?

**Ans**

❌ A. ಉದ್ದನೆಯ, ತೆಳುವಾದ ತಾಮ್ರ ವಾಹಕವು ಅದೇ ವೋಲ್ಟೇಜ್ ಅಡಿಯಲ್ಲಿ ಹೆಚ್ಚಿನ ವಿದ್ಯುತ್ ಶಕ್ತಿಯನ್ನು ಚದುರಿಸುತ್ತದೆ

✔ B. ಚಿಕ್ಕದಾದ, ದಪ್ಪದ ತಾಮ್ರ ವಾಹಕವು ಅದೇ ವೋಲ್ಟೇಜ್ ಅಡಿಯಲ್ಲಿ ಹೆಚ್ಚಿನ ವಿದ್ಯುತ್ ಶಕ್ತಿಯನ್ನು ಚದುರಿಸುತ್ತದೆ

❌ C. ಎಲ್ಲಾ ತಾಮ್ರದ ವಾಹಕಗಳು ಅದೇ ವೋಲ್ಟೇಜ್ ಅಡಿಯಲ್ಲಿ ಸಮಾನ ವಿದ್ಯುತ್ ಶಕ್ತಿಯನ್ನು ಚದುರಿಸುತ್ತವೆ

❌ D. ಮಧ್ಯಮ ಉದ್ದದ, ಮಧ್ಯಮ ದಪ್ಪದ ತಾಮ್ರ ವಾಹಕವು ಅದೇ ವೋಲ್ಟೇಜ್ ಅಡಿಯಲ್ಲಿ ಹೆಚ್ಚಿನ ವಿದ್ಯುತ್ ಶಕ್ತಿಯನ್ನು ಚದುರಿಸುತ್ತದೆ

**Q.99** ಒಂದು ಪ್ರಯೋಗಾಲಯವು ಒಂದೇ ರೀತಿಯ ಉಪಕರಣಗಳು ಮತ್ತು ಕಾರ್ಯವಿಧಾನಗಳನ್ನು ಬಳಸಿಕೊಂಡು ಮೂರು ತಂಡಗಳು ಪಡೆದ ಅಳತೆಗಳನ್ನು ಹೋಲಿಸುತ್ತದೆ. ಒಂದು ವೇಳೆ ಫಲಿತಾಂಶಗಳು ಗಮನಾರ್ಹವಾಗಿ ಭಿನ್ನವಾಗಿದ್ದರೆ, ಅದು ಏನನ್ನು ಸೂಚಿಸುತ್ತದೆ?

**Ans**

❌ A. ಮಾಪನಗಳು ಹೆಚ್ಚಿನ ನಿಖರತೆಯನ್ನು ಹೊಂದಿವೆ.

✔ B. ಅಳತೆಗಳ ಪುನರಾವರ್ತನೀಯತೆ ಕಡಿಮೆ ಇರುವುದು

❌ C. ಉಪಕರಣಗಳು ಅಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿವೆ.

❌ D. ಅಳತೆಗಳ ಪುನರಾವರ್ತನೀಯತೆ ಹೆಚ್ಚಾಗಿರುವುದು

Get India's No 1 Vocab Preparation App for FREE : Blackbook : English Vocabulary
GET IT ON Google Play

**Q.100** ಉದ್ದವಾದ ಸಾಲೆನಾಯ್ಡ್ ಸ್ಥಿರ ವಿದ್ಯುತ್ ಪ್ರವಾಹವನ್ನು ಹೊಂದಿದೆ. ಒಂದು ಆಂಪೀರಿಯನ್ ಕುಣಿಕೆಯನ್ನು ಸಂಪೂರ್ಣವಾಗಿ ಸಾಲೆನಾಯ್ಡ್‌ನ ಹೊರಗೆ ಆಯ್ಕೆ ಮಾಡಿಕೊಳ್ಳಲಾಗಿದೆ. ಆದರ್ಶ ಸಾಲೆನಾಯ್ಡ್ ಮಾದರಿಯ ಪ್ರಕಾರ, ಈ ಕುಣಿಕೆಯ ಉದ್ದಕ್ಕೂ ಇರುವ ಕಾಂತಕ್ಷೇತ್ರವು ಏನಾಗಿದೆ?

**Ans**

✗ A. ಏಕರೂಪ ಮತ್ತು ಶೂನ್ಯವಲ್ಲದ

✗ B. ಗರಿಷ್ಠ

✗ C. ಸೊಲೆನಾಯ್ಡ್ ನ ಒಳಗಿನ ಕ್ಷೇತ್ರಕ್ಕೆ ಸಮ

✓ D. ಶೂನ್ಯ

"

Blackbook

Get India's No 1 Vocab Preparation App for FREE : **Blackbook : English Vocabulary** GET IT ON Google Play

रेलवे भर्ती बोर्ड / RAILWAY RECRUITMENT BOARD
सीईएन ०२/२०२६ - तकनीशियन ग्रेड I सिगनल और तकनीशियन ग्रेड III
CEN 02/2026 - Technician Grade I Signal and Technician Grade III

| | |
|---|---|
| Test Date | 09/10/2026 |
| Test Time | 4:30 PM - 6:00 PM |
| Subject | RRB Technician Grade I Signal |

*** Note**
**Correct Answer will carry 1 mark per Question.**
**Incorrect Answer will carry 1/3 Negative mark per Question.**

